ಶ್ರೀ ಜಿ. ಪಿ. ರಾಜರತ್ನಂ ಸಂಸ್ಮರಣ – ೩

ವೈಶಾಖ ಪೂರ್ಣಿಮೆ
ಸಂಬೋಧಿಯ ಸಂದರ್ಭ

ಶ್ರೀ ಜಿ. ಪಿ. ರಾಜರತ್ನಂ ಶ್ರದ್ಧಾಂಜಲಿ

ವಿದ್ಯಾಲಂಕಾರ ಪ್ರೊ|| ಎಸ್. ಕೆ. ರಾಮಚಂದ್ರರಾವ್

1979

ಶ್ರೀ ಜಿ. ಪಿ. ರಾಜರತ್ನಂ ಸಂಸ್ಮರಣ ಸಮಿತಿ
ದಕ್ಷಿಣ ಕನ್ನಡ

ಶ್ರೀ ಜಿ. ಪಿ. ರಾಜರತ್ನಂ ಸಂಸ್ಮರಣ – ೩

ವೈಶಾಖ ಪೂರ್ಣಿಮೆ

ಸಂಬೋಧಿಯ ಸಂದರ್ಭ

ಶ್ರೀ ಜಿ. ಪಿ. ರಾಜರತ್ನಂ ಶ್ರದ್ಧಾಂಜಲಿ

ವಿದ್ಯಾಲಂಕಾರ ಪ್ರೊ|| ಎಸ್. ಕೆ. ರಾಮಚಂದ್ರರಾವ್

1979

ಶ್ರೀ ಜಿ. ಪಿ. ರಾಜರತ್ನಂ ಸಂಸ್ಮರಣ ಸಮಿತಿ
ದಕ್ಷಿಣ ಕನ್ನಡ

"VAISHAKHA PURNIME"—A talk delivered by Vidyalankara Prof. S. K. Ramachandra Rao on 12th May 1979 at Manipal and published by "The G. P. Rajaratnam Memorial Committee, Dakshina Kannada".

Pages iv+24 Price Re. 1/-

ಶ್ರೀ ಡಿ. ವೀರೇಂದ್ರ ಹೆಗ್ಗಡೆ
ಅಧ್ಯಕ್ಷರು

ಪ್ರೊ|| ತೆಕ್ಕುಂಜ ಗೋಪಾಲಕೃಷ್ಣ ಭಟ್ಟ
ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ
ಪ್ರೊ|| ಜಿ. ರಘುನಾಥ ರೈ
ಶ್ರೀ ಎಚ್. ಡಿ. ಎಸ್. ಪೈ
ಸಲಹೆಗಾರರು

ಶ್ರೀ ಅ. ಬಾಲಕೃಷ್ಣ ಶೆಟ್ಟಿ ಪೊಳಲಿ
ಶ್ರೀ ಎಮ್. ರಾಮಚಂದ್ರ
ಸಂಚಾಲಕರು

ಶ್ರೀ ಜಿ. ಪಿ. ರಾಜರತ್ನಂ ಸಂಸ್ಮರಣ ಸಮಿತಿ

ಮುದ್ರಕರು:
ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು.

ನಮ್ಮ ಮಾತು

'ಶ್ರೀ ರಾಜರತ್ನಂ ಸಂಸ್ಮರಣ' ಮಾಲೆಯಲ್ಲಿ ಮೂರನೆಯ ಪುಸ್ತಕ ಇದೀಗ ಪ್ರಕಟವಾಗುತ್ತಿದೆ. ಕಳೆದ ಮೇ ತಿಂಗಳ 12ನೆಯ ಶನಿವಾರ–ಬುದ್ಧ ಪೂರ್ಣಿಮೆಯ ದಿನ ಮಣಿಪಾಲದ 'ಸಾಹಿತ್ಯ ಸಂಘ'ದ ಆಶ್ರಯದಲ್ಲಿ ಎರಡನೆಯ "ರಾಜರತ್ನಂ ಸಂಸ್ಮರಣ ಸಭೆ" ನಡೆಯಿತು. ಬುದ್ಧ ಗುರುವಿನಲ್ಲೂ, ಬೌದ್ಧ ಸಾಹಿತ್ಯದಲ್ಲೂ ಶ್ರೀ ರಾಜರತ್ನಂರಿಗೆ ಅಪರಿಮಿತ ಆದರಾಸಕ್ತಿಗಳಿದ್ದುದರಿಂದ ಬುದ್ಧ ಪೂರ್ಣಿಮೆಯ ದಿನ ಸಮಯೋಚಿತ ಉಪನ್ಯಾಸವೊಂದನ್ನು ಏರ್ಪಡಿಸುವ ಹಂಬಲದಿಂದ ವಿದ್ಯಾಲಂಕಾರ ಪ್ರೊ|| ಎಸ್. ಕೆ. ರಾಮಚಂದ್ರರಾಯರನ್ನು ಪ್ರಾರ್ಥಿಸಿಕೊಂಡೆವು. ಸಭೆಯಲ್ಲಿ ಭಾಗವಹಿಸಿ ಉಪನ್ಯಾಸಮಾಡಲು ಅವರು ಸಂತೋಷದಿಂದಲೇ ಸಮ್ಮತಿಸಿದರು. ಆದರೆ ಅನಿರೀಕ್ಷಿತ ಅನಾರೋಗ್ಯ ನಿಮಿತ್ತ ಪ್ರೊ|| ರಾಯರ ಪ್ರಯಾಣವು ರದ್ದಾಯಿತು. ಸುದೈವದಿಂದ ಅವರು ಭಾಷಣವನ್ನು ಮೊದಲೇ ಬರೆದು ಕಳುಹಿಸಿದ್ದುದರಿಂದ, ಅದರ ಕೆಲವು ಭಾಗಗಳನ್ನು ಸಭೆಯಲ್ಲಿ ಓದಲಾಯಿತು. ಆ ಪ್ರೌಢ, ಬೋಧಪ್ರದ ಉಪನ್ಯಾಸವು ಪುಸ್ತಕ ರೂಪದಲ್ಲಿ ಪ್ರಕಟವಾಗಿ ಈಗ ಮಹಾಜನರ ಕೈಸೇರುತ್ತಿದೆ. ಅಲ್ಪಕಾಲದಲ್ಲಿ ಉಪನ್ಯಾಸವನ್ನು ಸಿದ್ಧಪಡಿಸಿ ಸಹಕರಿಸಿದ ಪ್ರೊ|| ರಾಯರಿಗೆ ಸಮಿತಿಯು ಋಣಿಯಾಗಿದೆ.

ವಿದ್ಯಾಲಂಕಾರ ಪ್ರೊ|| ರಾಮಚಂದ್ರರಾಯರ ಅನುಪಸ್ಥಿತಿಯಲ್ಲಿ ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು ಸಮಿತಿಗೆ ನೆರವಾದರು; ಕಾಲೋಚಿತವಾದ ಭಾಷಣಮಾಡಿ ಸಭೆಯನ್ನು ಸಂತೋಷಪಡಿಸಿದರು. ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಅದೇ ದಿನ, ಸಣ್ಣದಾದರೂ, ಅಡಕವಾದ ಅಚ್ಚುಕಟ್ಟಾದ "ಜೀವರತ್ನ"ದ ಬಿಡುಗಡೆಯಾಯಿತು ಶ್ರೀ ರಾಜರತ್ನಂ ಅವರ ಸಮೀಪವರ್ತಿಗಳಾಗಿದ್ದು ಅವರ ಅಂತರಂಗ–ಬಹಿರಂಗಗಳನ್ನು ಅರ್ಥಮಾಡಿಕೊಂಡ ಹತ್ತಾರು ಮಂದಿ ಮಹನೀಯರು ಪತ್ರಿಕೆಗಳಲ್ಲಿ ಬರೆದಿದ್ದ ಮರ್ಮಸ್ಪರ್ಶಿಯಾದ ಲೇಖನಗಳನ್ನು ಸೇರಿಸಿ ಕಟ್ಟಿದ ಗುಚ್ಛವೇ "ಜೀವರತ್ನ". ಅದನ್ನು ಬಿಡುಗಡೆಮಾಡಿ ಓದುಗರಿಗೆ ಒಪ್ಪಿಸಿದವರು ಹಿರಿಯ ವಿದ್ವಾಂಸ ಶ್ರೀ ಸೇಡಿಯಾಪು ಕೃಷ್ಣಭಟ್ಟರು. ಅವರಿಗೆ ನಮ್ಮ ಹಾರ್ದಿಕ ಧನ್ಯವಾದ.

'ಸಂಸ್ಮರಣ ಸಮಿತಿ'ಯ ಅಧ್ಯಕ್ಷ ಶ್ರೀ ವೀರೇಂದ್ರ ಹೆಗ್ಗಡೆಯವರೇ ಸಭೆಯ ಅಧ್ಯಕ್ಷತೆಯನ್ನೂ ವಹಿಸಿ ಅಂದಿನ ಕಲಾಪಗಳನ್ನು ನೆರವೇರಿಸಿಕೊಟ್ಟರು.

ಈಗಾಗಲೇ ಸಮಿತಿಯು ಪ್ರಕಟಿಸಿರುವ ಮೂರು ಪುಸ್ತಕಗಳನ್ನೂ ಇನ್ನು ಮುಂದಿನ ಹತ್ತು-ಹನ್ನೆರಡನ್ನೂ ಮಹಾಜನರು ಕೊಂಡು, ಓದಿ ಪುಣ್ಯಕಾರ್ಯವೊಂದರಲ್ಲಿ ಸಹಭಾಗಿಗಳಾಗುವಂತೆ ಪ್ರಾರ್ಥಿಸುತ್ತಿದ್ದೇವೆ.

ಜ್ಯೇಷ್ಠ ಪೂರ್ಣಿಮಾ
ತಾ|| 10-6-1979

ಅ. ಬಾಲಕೃಷ್ಣ ಶೆಟ್ಟಿ ಪೊಳಲಿ
ಎಮ್. ರಾಮಚಂದ್ರ

ವೈಶಾಖ ಪೂರ್ಣಿಮೆ—ಸಂಬೋಧಿಯ ಸಂದರ್ಭ

(೧)

ತಮ್ಮ ಚೇತನದಿಂದ, ಬದುಕಿನಿಂದ, ಬರಹಗಳಿಂದ ಹಿರಿಯರಾದ ರಾಜರತ್ನಂ ಕಣ್ಮರೆಯಾದದ್ದು ಹುಣ್ಣಿಮೆಯಂದು. ಅವರು ಬದುಕಿನುದ್ದಕ್ಕೂ ಆದರದಿಂದ ಅಧ್ಯಯನಮಾಡಿ ಕನ್ನಡಜನಕ್ಕೆ ತಿಳಿಯಹೇಳಿದ ಬೌದ್ಧಧರ್ಮವು ಹುಣ್ಣಿಮೆಯ ಹಿರಿಮೆಯನ್ನು ಎತ್ತಿಹಿಡಿದದ್ದು. ಹೀಗಾಗಿ ಹುಣ್ಣಿಮೆಯಂದು ರಾಜರತ್ನಂ ಸ್ಮರಣೆ ಮಾಡುವುದರಲ್ಲಿ ಔಚಿತ್ಯವಿದೆ. ಅದೂ ಈ ವೈಶಾಖ ಪೂರ್ಣಿಮೆ ಅವರಿಗೆ ತುಂಬ ಪ್ರಿಯವೆನಿಸಿದ ದಿವಸ. ಅವರ ಬಾಳದೀಪವಾಗಿ ಬೆಳಗಿದ ಬುದ್ಧ ಹುಟ್ಟಿದ್ದೂ, ಮೂವತ್ತೈದು ವರ್ಷಗಳ ಮೇಲೆ ಸಂಬೋಧಿಯನ್ನು ಪಡೆದದ್ದೂ, ಎಂಬತ್ತನೆಯ ವಯಸ್ಸಿನಲ್ಲಿ ತೀರಿಕೊಂಡದ್ದೂ ವೈಶಾಖ ಮಾಸದ ಹುಣ್ಣಿಮೆಗಳಲ್ಲೇ. ಈ ವರ್ಷದ ವೈಶಾಖ ಪೂರ್ಣಿಮೆಯಂದು ರಾಜರತ್ನಂ ಸ್ಮರಣೆ ಮಾಡಲು ನನ್ನನ್ನು ನೀವು ಕರೆಯಿಸಿಕೊಂಡಿರುವುದು ನನ್ನ ಪುಣ್ಯ ವಿಶೇಷದಿಂದ.

ರಾಜರತ್ನಂ ನನಗೆ ಹಿರಿಯರು. ನನ್ನ ಶಾಲಾದಿನಗಳಲ್ಲೇ ಅವರಿಂದ ಸ್ಫೂರ್ತಿಯನ್ನು ಪಡೆದುಕೊಂಡೆ. ಬೌದ್ಧದರ್ಶನದಲ್ಲಿ ನನ್ನ ಆಸಕ್ತಿ ಮೊದಲು ಮೂಡಿದ್ದು ಅವರ ಅನುವಾದಗಳಿಂದಲೇ. ಮುಂದೆ ಸಿಂಹಳದ ಭಿಕ್ಷುಗಳ, ಜಪಾನೀ ಯತಿಗಳ, ಟಿಬೆಟನ್ ಲಾಮಾಗಳ ಸಂಪರ್ಕ ಒದಗಿ ನನ್ನ ಅಧ್ಯಯನವೂ ಅಭ್ಯಾಸವೂ ಬೇರೂರಲು ಈ ಮೊದಲ ಆಸಕ್ತಿಯೇ ನಾಂದಿಯಾಯಿತು. ನೇರವಾಗಿ ಅವರ ಬಳಿ ಏನನ್ನೂ ಕಲಿಯುವ ಅವಕಾಶ ನನಗೆ ಒದಗಿಬರದಿದ್ದರೂ, ಅವರನ್ನು ಮಾರ್ಗದರ್ಶಿಯೆಂದು ಭಾವಿಸಿಕೊಂಡಿದ್ದೇನೆ. ಅವರ ಪರಿಚಯದ ಪುಣ್ಯವನ್ನೂ, ಅವರ ಅಭಿಮಾನದ ಸೌಭಾಗ್ಯವನ್ನೂ ಪಡೆದುಕೊಂಡು ನನ್ನ ಬಾಳು ಹಸನಾಗಿದೆ. ಅವರನ್ನು ಹೀಗೆ ಇಂದು ಸ್ಮರಿಸಿಕೊಳ್ಳುವ ಸಂದರ್ಭ ನನ್ನ ಪಾಲಿಗೆ ಪವಿತ್ರ ಕರ್ತವ್ಯ. ಅದನ್ನು ನನಗೆ ಒದಗಿಸಿಕೊಟ್ಟ ನಿಮಗೆ ಋಣಿಯಾಗಿದ್ದೇನೆ.

(೨)

ಬುದ್ಧನ ವಿಚಾರವಾಗಿ ಗೌರವಬುದ್ಧಿ ಇರುವ ಮಂದಿಗೆ ವೈಶಾಖ ಪೂರ್ಣಿಮೆ ದೊಡ್ಡದಿನ. ಎರಡು ಸಾವಿರದ ಆರುನೂರು ವರ್ಷಗಳಷ್ಟು ಹಿಂದೆ

ನೇಪಾಳ ತೆರೆಯ ಕಪಿಲವಸ್ತುವಿನಲ್ಲಿ ಶುದ್ಧೋದನರಾಜನ ಮಗನಾಗಿ ಮಾಯಾದೇವಿಯ ಒಡಲಿಂದ ಗೌತಮನಾಗಿ ಕಾಣಿಸಿಕೊಂಡದ್ದು ವೈಶಾಖಮಾಸದ ಹುಣ್ಣಿಮೆಯಂದು. ತನ್ನ ಮೂವತ್ತೈದುವರ್ಷ ವಯಸ್ಸಿನಲ್ಲಿ ಗಯೆಯ ಉರುವಿಲ್ವ ವನದಲ್ಲಿ ನೇರಂಜರಾ ನದಿಯ ದಂಡೆಯ ಮೇಲಿನ ಅರಳೀಮರವೊಂದರ ಕೆಳಗೆ ಕುಳಿತು ಸಂಬೋಧಿಯನ್ನು ಪಡೆದದ್ದೂ ವೈಶಾಖದ ಹುಣ್ಣಿಮೆಯಂದೇ. ಮುಂದೆ ನಲವತ್ತೈದು ವರ್ಷಗಳ ನಂತರ ಕುಸೀನಾರದ ಕಾಡಿನಲ್ಲಿ ಎರಡು ಸಾಲಮರಗಳ ನಡುವೆ ಮಲಗಿ ತೀರಿಕೊಂಡಾಗಲೂ ವೈಶಾಖದ ಹುಣ್ಣಿಮೆಯೇ. ಹೀಗೆ ಬುದ್ಧನ ಬದುಕಿನ ಮೂರು ಮುಖ್ಯ ಘಟ್ಟಗಳು—ಜನ್ಮ, ಸಂಬೋಧಿ, ಪರಿನಿರ್ವಾಣ—ಜರುಗಿದ್ದು ವೈಶಾಖ ಪೂರ್ಣಿಮೆಗಳಲ್ಲೇ.

ವೈಶಾಖ ಪೂರ್ಣಿಮೆ ದೊಡ್ಡದಿನವೆಂದು ನಮ್ಮವರು ಭಾವಿಸಿರುವುದು ಬುದ್ಧನ ಕಾಲದಿಂದೀಚೆ ಮಾತ್ರವಲ್ಲ. ಅದಕ್ಕೂ ಮೊದಲು ಆ ಮಾಸದ ಹುಣ್ಣಿಮೆಯ ಹಿರಿಮೆಯನ್ನು ಜ್ಯೋತಿಷ ಗ್ರಂಥಗಳು ಎತ್ತಿಹಿಡಿದಿವೆ. ವಿಶಾಖಾ ನಕ್ಷತ್ರದಿಂದ ಕೂಡಿದ ಹುಣ್ಣಿಮೆಗೆ ವೈಶಾಖಿಯೆಂದು ಹೆಸರು; ಅದು ಬರುವ ಮಾಸವೇ ವೈಶಾಖ. ಹನ್ನೆರಡು ಮಾಸಗಳಲ್ಲಿ ವೈಶಾಖವೇ ಮೊದಲಮಾಸವೆಂಬ ಎಣಿಕೆ ಮೊದಲಿಗೆ ಇದ್ದಿತು; ಈಗಲೂ ಹಲವು ಕಡೆ ಇದೇ ಎಣಿಕೆಯಿದೆ. ನಮ್ಮಲ್ಲಿ ನಾಲ್ಕು ಯುಗಗಳ ಗಣನೆಯಿದೆಯಷ್ಟೆ. ವೈಶಾಖಮಾಸದ ಶುಕ್ಲ ತದಿಗೆಯಿಂದ ಮೊದಲ ಯುಗವಾದ ಕೃತ; ಕಾರ್ತಿಕಮಾಸದ ಶುಕ್ಲನವಮಿಯಿಂದ ಎರಡನೆಯದಾದ ತ್ರೇತಾಯುಗ; ಭಾದ್ರಪದ ಮಾಸದ ತ್ರಯೋದಶಿಯಿಂದ ದ್ವಾಪರ; ಮಾಘ ಮಾಸದ ಹುಣ್ಣಿಮೆಯಿಂದ ಕಲಿಯುಗ—ಹೀಗೆ ನಾಲ್ಕು ಯುಗಗಳನ್ನು ಅಡಕಮಾಡಿರುವುದಿದೆ. ವೈಶಾಖದಲ್ಲಿಯೇ ಯುಗಾದಿ ಎಂಬುದು ಹಿಂದಿನ ಪ್ರತೀತಿ.

ಮೇಷರಾಶಿಯಲ್ಲಿ ಸೂರ್ಯನಿರುವುದು ಈ ಮಾಸದ ವಿಶೇಷ. ಹೀಗಿರುವುದರಿಂದಲೇ "ಸರ್ವೇಷಾಮೇವ ಮಾಸಾನಾಂ ವೈಶಾಖಃ ಪ್ರವರಃ ಸ್ಮೃತಃ" ಎಂಬ ಮಾತಿರುವುದು. ಪಿತೃದೇವತೆಗಳು ವೈಶಾಖವನ್ನೇ ಎದುರುನೋಡುತ್ತಿರುವರಂತೆ—"ವೈಶಾಖಮಾಗತಂ ದೃಷ್ಟ್ವಾ ಪಿತೃಣಾಮುತ್ಸವೋ ಭವೇತ್" ಈ ಮಾಸಕ್ಕೆ "ಮಾಧವ" ಎಂದೂ "ರಾಧ" ಎಂದೂ ಹೆಸರುಗಳಿವೆ. ವೈಶಾಖ ಮಾಹಾತ್ಮ್ಯೆಯಲ್ಲಿ ಈ ತಿಂಗಳು ಮಾಧವಮಾಸವೇ. ವಿಷ್ಣುವಿನ ಅವತಾರವೆಂದು ಬುದ್ಧನನ್ನು ಬಗೆದವರು ಈ ಸಂಬಂಧವನ್ನು ಅವಲಂಬಿಸಿದರೋ ಏನೋ,

ತಿಳಿಯದು. 'ಕೋಷ್ಠೀಪ್ರದೀಪ' ಎಂಬ ಹಳೆಯ ಜ್ಯೋತಿಷಗ್ರಂಥದಲ್ಲಿ ಈ ಮಾಸದಲ್ಲಿ ಹುಟ್ಟಿದವನ ಹಿರಿಮೆಯನ್ನು ಹೇಳುವ ಮಾತಿದೆ—

"ಗುಣಾಭಿರಾಮೋಽಥ ಜಗತ್ಪ್ರಿಯಃ ಸ್ಯಾತ್ |
ವೈಶಾಖಮಾಸೇ ಖಲು ಯಸ್ಯ ಜನ್ಮ ||"

ಬುದ್ಧನ ವಿಚಾರದಲ್ಲಂತೂ ಈ ಮಾತು ದಿಟವಾಯಿತು. ಅವನು ಗುಣಾಭಿರಾಮನೂ ಹೌದು, ಜಗತ್ಪ್ರಿಯನೂ ಹೌದು. ವೈಶಾಖ ಪೂರ್ಣಿಮೆಯೆಂದರೆ ಈ ಗುಣಾಭಿರಾಮನ, ಜಗತ್ಪ್ರಿಯನ ಸ್ಮರಣೆಯ ಸಂದರ್ಭ. ವೈಶಾಖ ಪೂರ್ಣಿಮೆಯಂತೆ ಗೌತಮಬುದ್ಧನೂ ಒಂದು ಸಂಕೇತ, ಒಂದು ಪ್ರತೀಕ.

(೩)

ವೈಶಾಖ ಪೂರ್ಣಿಮೆ ಬುದ್ಧನ ಜನ್ಮ, ಸಂಬೋಧಿ, ಪರಿನಿರ್ವಾಣಗಳು ನಡೆದ ದಿನ. ಜನ್ಮ ಸಂಬೋಧಿಗೆ ಸಿದ್ಧತೆ; ಪರಿನಿರ್ವಾಣ ಸಂಬೋಧಿಯ ಫಲ. ಎಂದರೆ ಸಂಬೋಧಿಯೇ ಬುದ್ಧನ ಪ್ರತೀಕದ ಸಾರ. ಅದನ್ನು ಕುರಿತು ನಾಲ್ಕು ಮಾತುಗಳನ್ನು ಈ ಸಂಜೆ ಹೇಳಲು ನಿಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ. ಬುದ್ಧನ ಬಾಳಕಥೆ ನಿಮಗೆ ತಿಳಿದೇ ಇದೆ. ಅದರಲ್ಲಿ ಕಾವ್ಯದ ಅಂಶವೂ ಕಲ್ಪನೆಯ ಭಾಗಗಳೂ ಸೇರಿಕೊಂಡು, ದಿಟವಾಗಿ ಐತಿಹಾಸಿಕ ವಿವರಗಳೇನು ಎಂಬುದು ಈ ಕಾಲಕ್ಕೆ ತಿಳಿಯುವ ಹಾಗಿಲ್ಲ. ಅದರ ಗೊಡವೆ ನಮಗೆ ಈಗ ಬೇಡ. ಪ್ರಚಲಿತವಾಗಿರುವ ನಿರೂಪಣೆಯಂತೆ ರಾಜಪುತ್ರನಾಗಿ ಹುಟ್ಟಿ ಬೆಳೆದ ಗೌತಮ-ಸಿದ್ಧಾರ್ಥ (ಗೌತಮನೆಂಬುದು ಗೋತ್ರ, ಸಿದ್ಧಾರ್ಥನೆಂಬುದು ಇಟ್ಟ ಹೆಸರು) ಹರೆಯದಲ್ಲಿ ಬಾಳಿನ ಬಗ್ಗೆ ಬೇಸರ ತಳೆದು, ಮನೆಯಿಂದ ಹೊರಗಾಗಿ, ಕಾಡಿನಲ್ಲಿ ತಪಶ್ಚರ್ಯೆಮಾಡಿ, ಯೋಗಾಭ್ಯಾಸಮಾಡಿ ಸಂಬೋಧಿಯನ್ನು ಪಡೆದು 'ಬುದ್ಧ'ನಾದ. ಅನಂತರ ತನ್ನ ಊರ ಸುತ್ತಮುತ್ತ ತಿರುಗಾಡಿ ತಾನು ಕಂಡುಕೊಂಡ ಸಂಬೋಧಿಯ ಸ್ವಾರಸ್ಯವನ್ನು ಆಸಕ್ತರಾದ ಮಂದಿಗೆ ತಿಳಿಯ ಹೇಳಿದ. ತನ್ನಂತೆ ಅವರೂ ಸಂಬೋಧಿಯನ್ನು ಪಡೆಯಲು ಸಾಧನೆಯೊಂದನ್ನು ಸಿದ್ಧಪಡಿಸಿದ. ಸಾಧನೆಯನ್ನು ನಡೆಸಲು ಅನುಕೂಲವಾಗಲೆಂದು ಸಂಘ-ವೊಂದನ್ನು ಸ್ಥಾಪಿಸಿದ. ಹೀಗೆ ಸಂಬೋಧಿ, ಸಾಧನೆ, ಸಂಘಗಳ ಒಕ್ಕೂಟವೇ ಬುದ್ಧಧರ್ಮ.

ಸಂಬೋಧಿಯನ್ನು ಪಡೆದ ವ್ಯಕ್ತಿ ಬುದ್ಧ, ಸಂಬೋಧಿಯ ಸಾಧನೆ ಧರ್ಮ, ಸಾಧನೆಯ ಅನುಕೂಲ್ಯ ಸಂಘ. ಬುದ್ಧ-ಧರ್ಮ-ಸಂಘಗಳು ಬೌದ್ಧರ ತ್ರಿರತ್ನಗಳು, ಶರಣತ್ರಯಗಳು. ಮೂರೂ ಅವಲಂಬಿಸಿರುವುದು ಸಂಬೋಧಿಯನ್ನೇ. ಸಿದ್ಧಾರ್ಥನು ಬುದ್ಧನಾದದ್ದು ಸಂಬೋಧಿಯಿಂದಲೇ. ಅವನ ಬಾಳುವೆಯಲ್ಲಿ ಮಾರ್ಪಾಟನ್ನು ಒದಗಿಸಿದ್ದು ಸಂಬೋಧಿ. ನಮ್ಮ ನಾಡಿನ ಇತಿಹಾಸದ ದಾರಿಯನ್ನು ಬದಲಿಸಿದ್ದೂ ಸಂಬೋಧಿಯೇ.

ಬುದ್ಧನೆನ್ನುವುದು ಗೌತಮನೊಬ್ಬನಿಗೆ ಸೀಮಿತವಾದ ಶಬ್ದವಲ್ಲ. ಬೌದ್ಧರ ಎಣಿಕೆಯಲ್ಲಿ ಬುದ್ಧರು ಅಸಂಖ್ಯಾತರು. ಅವರು ದಿನವೂ ಹೇಳುವ ಸ್ತುತಿ ಹಿಂದೆ ಆಗಿ ಹೋದ ಎಲ್ಲ ಬುದ್ಧರಿಗೆ, ಮುಂದೆ ಬರುವ ಎಲ್ಲ ಬುದ್ಧರಿಗೆ, ಇಂದು ಇರುವ ಎಲ್ಲ ಬುದ್ಧರಿಗೆ.

ಯೇ ಚ ಬುದ್ಧಾ ಅತೀತಾ ಚ| ಯೇ ಚ ಬುದ್ಧಾ ಅನಾಗತಾ|
ಪಚ್ಚುಪ್ಪನ್ನಾ ಚ ಯೇ ಬುದ್ಧಾ| ಅಹಂ ವಂದಾಮಿ ಸಬ್ಬದಾ||

ಎಲ್ಲ ಬುದ್ಧರಿಗೂ ಸಮಾನವಾದುದು ಸಂಬೋಧಿಯೊಂದೇ. ಬುದ್ಧ ಎನ್ನುವುದು ಒಂದು ಕಲ್ಪನೆ, ಒಂದು ಸಂಕೇತ, ಒಂದು ಧ್ಯೇಯ, ಒಂದು ಆದರ್ಶ. ಪ್ರತಿಯೊಬ್ಬನಲ್ಲೂ ಬುದ್ಧನ ಬೀಜ ಇದೆ; ಅದು ಬೆಳೆದು ಮರವಾಗಬೇಕಾದರೆ ಸಂಬೋಧಿ ಒದಗಬೇಕು; ಸಂಬೋಧಿ ಒದಗಲು ಸಾಧನೆಯ ಅಗತ್ಯವಿದೆ. ಸಾಧನೆಗೆ ತಕ್ಕ ಸಿದ್ಧತೆಯೂ ಬೇಕು. ಗೌತಮನಿಗೆ ಸಂಬೋಧಿ ಒದಗಿ ಅವನು ಬುದ್ಧನಾದ ಘಟ್ಟವನ್ನು ಕೊಂಚ ಪರಿಶೀಲನೆ ಮಾಡಿದರೆ ಸಂಬೋಧಿಯ ಸ್ವಾರಸ್ಯವೇನು, ಅದರ ಸಾರ್ಥಕ್ಯವೇನು ಎನ್ನುವುದು ಮನದಟ್ಟಾದೀತು.

(೪)

ಗೌತಮನಿಗೆ ಇಪ್ಪತ್ತೊಂಬತ್ತನೆಯ ವರ್ಷ ನಡೆಯುತ್ತಿದ್ದಾಗ, ಆಷಾಢ ಮಾಸದ ಹುಣ್ಣಿಮೆಯಂದು ಬದುಕಿನಲ್ಲಿ ಬೇಸರವಾಯಿತು. ಲೋಕದ ರೋಗ-ರುಜಿನೆಗಳು, ಮುಪ್ಪು-ಸಾವುಗಳು, ಅಡ್ಡಿ-ಆತಂಕಗಳನ್ನು ಕುರಿತು ಆಲೋಚನೆ ಮಾಡಿದಾಗ ಯೌವನ, ಆರೋಗ್ಯ, ಜೀವಿತಮದಗಳು ಇಳಿದುವು. ಮನೆಯಿಂದ ಹೊರಗಾಗಿ 'ಮನೆಯಿಲ್ಲದವ'ನಾದ. "ಅಗಾರಸ್ಮಾ ಅನಗಾರಿಯಂ ಪಬ್ಬಜಿ" ಎಂದು ಪಾಳಿಯ ಮೂಲ. 'ಸುತ್ತನಿಪಾತ'ವೆಂಬ ಗ್ರಂಥಭಾಗದಲ್ಲಿ

ಪ್ರವ್ರಜ್ಯಾ ಸೂತ್ರವೆಂಬ ಖಂಡವಿದೆ. ಸಿದ್ಧಾರ್ಥನು ಮನೆಯಿಂದ ಹೊರಗಾದುದನ್ನು ಅವನೇ ಹೇಳುವ ಭಾಗ ಇದು—

"ಸಂಬಾಧೋಽಯಂ ಘರಾವಾಸೋ ರಜಸ್ಸಾಯತನಂ ಇತಿ|
ಅಬ್ಭೊಕಾಸೋ ಚ ಪಬ್ಬಜ್ಜಾ ಇತಿ ದಿಸ್ವಾನ ಪಬ್ಬಜಿ||"

"ಮನೆಯಲ್ಲಿರುವುದು ಅಡ್ಡಿ-ಆತಂಕ; ಕೊಳೆಯ ಬೀಡು ಮನೆ; ಹೊರಗಾಗುವುದು ಬಿಡುಗಡೆ—ಹೀಗೆಂದುಕೊಂಡು ಹೊರಗಾದೆ" ಎಂದು ಅವನ ಮಾತು. ಮನೆ ಬಿಟ್ಟವನು ಮೈಗೆ ಅಂಟಿದ ಅಕುಶಲ ಕರ್ಮಗಳನ್ನೆಲ್ಲ ಬಿಟ್ಟನಂತೆ; ಮಾತಿನ ಕೆಡುಕುಗಳನ್ನೆಲ್ಲ ದೂರಮಾಡಿಕೊಂಡನಂತೆ; ಇಡೀ ಬದುಕನ್ನು ಶೋಧಿಸಿಕೊಂಡನಂತೆ—

"ಪಬ್ಬಜಿತ್ವಾನ ಕಾಯೇನ ಪಾಪಕಮ್ಮಂ ವಿವಜ್ಜಯಿ|
ವಚೀದುಚ್ಚರಿತಂ ಹಿತ್ವಾ ಆಜೀವಂ ಪರಿಸೋಧಯಿ||"

ಹೀಗೆ ಹೊರಟವನು ಆರಾಢ-ಕಾಲಾಮ ಮತ್ತು ರುದ್ರಕ-ರಾಮಪುತ್ರ ಎಂಬ ಗುರುಗಳ ಬಳಿ ಯೋಗವನ್ನು ಅಭ್ಯಾಸಮಾಡಿ, ನೆಮ್ಮದಿ ಕಾಣದೆ, ಉರುವಿಲ್ವವೆಂಬ ಕಾಡಿಗೆ ನಡೆದು ಅಲ್ಲಿ ನೈರಂಜನಾ ನದಿಯ ದಡದ ಮೇಲೆ ಆರು ವರ್ಷಗಳ ಕಾಲ ಕಠಿಣವಾದ ತಪಸ್ಸನ್ನು ಮಾಡಿದ. ಇದೂ ದಾರಿಗಾಣಿಸಲಿಲ್ಲ. ಕಡೆಗೆ ಧ್ಯಾನಮಾರ್ಗವನ್ನು ಹಿಡಿದ. ಅರಳಿಮರವೊಂದರ ಕೆಳಗೆ ಕುಳಿತು, "ಸಂಬೋಧಿಯನ್ನು ಪಡೆಯದೆ ಈ ಜಾಗದಿಂದ ಮೇಲೇಳುವುದಿಲ್ಲ. ನನ್ನ ಮಾಂಸವೆಲ್ಲ ಕರಗಿ, ಮೂಳೆಗಳು ಕೆಳಗುರುಳಿ, ನರಗಳು ಒಣಗಿ, ಚರ್ಮ ಒಣಸಿಪ್ಪೆಯಂತೆ ಮುದುಡಿಕೊಂಡರೂ ಚಿಂತೆಯಿಲ್ಲ, ನನ್ನ ಪ್ರಯತ್ನವನ್ನು ಬಿಡುವುದಿಲ್ಲ!" ಎಂದು ದೃಢಸಂಕಲ್ಪ ಮಾಡಿದ.

ಸಂಕಲ್ಪದ ದಾರ್ಢ್ಯ ಮತ್ತು ಧ್ಯಾನದ ಸಾಮರ್ಥ್ಯ ಎರಡರ ಫಲವಾಗಿ ಅಂತಃಕರಣದ ಗೋಜು-ಗೊಂದಲಗಳೆಲ್ಲವೂ ಹರಿದು ಸಂಬೋಧಿ ಒದಗಿತು. ಸಿದ್ಧಾರ್ಥನಾಗಿದ್ದವನು ಬುದ್ಧನಾದ. ಅಲ್ಲಿಂದ ಮುಂದೆ ಅವನನ್ನು 'ಸಮ್ಯಕ್ ಸಂಬುದ್ಧ'ನೆಂದು ಕರೆಯತೊಡಗಿದರು. ಆಗ ಅವನಿಗೆ ಮೂವತ್ತೈದರ ಪ್ರಾಯ.

ಮುಂದಿನ ಕಥೆ ನಮಗೆ ಅಷ್ಟು ಪ್ರಸ್ತುತವಲ್ಲ. ಮೊದಲು ತಾನು ಕಂಡುಕೊಂಡ ಸಂಬೋಧಿಯನ್ನು ಇತರರಿಗೆ ತಿಳಿಸುವುದೋ ಬೇಡವೋ ಎಂದು ತರ್ಕ

ಮಾಡಿ, ಕಡೆಗೆ ತಿಳಿಸುವೆನೆಂದು ನಿರ್ಧರಿಸಿ ಊರೂರು ತಿರುಗಾಡಿ ಧರ್ಮ ಪ್ರವಚನ ಮಾಡಿದ. ಜನ ನೆರೆದರು, ಶಿಷ್ಯರು ಸೇರಿದರು, ರಾಜರೂ ಸನ್ಮಾನಮಾಡಿದರು, ಸಂಘ ಸೇರಿತು, ಬೆಳೆಯಿತು. ನಲವತ್ತೈದು ವರ್ಷಗಳನ್ನು ಹೀಗೆ ಪ್ರವಚನ ಮಾಡುತ್ತ, ಶಿಷ್ಯರಿಗೆ ಮಾರ್ಗದರ್ಶನ ಮಾಡುತ್ತ ಕಳೆದು, ಕಡೆಗೆ ಮಲ್ಲರ ರಾಜ್ಯದಲ್ಲಿದ್ದ ಕುಶೀನಾರಾ ಎಂಬಲ್ಲಿ ನೆಮ್ಮದಿಯಿಂದ ತೀರಿಕೊಂಡ. ಆಗ ಅವನಿಗೆ ಎಂಬತ್ತು ವರ್ಷ ವಯಸ್ಸು. ತೀರಿಕೊಳ್ಳುವ ಮೊದಲು, ತಾನು ಮರೆಯಾದ ಮೇಲೆ ಧರ್ಮವೇ ಮಾರ್ಗದರ್ಶಿ ಎಂದು ತಿಳಿಸಿದ. ಶಿಷ್ಯರಿಗೆ "ವಯು ಧಮ್ಮಾ ಸಂಖಾರಾ, ಅಪ್ಪಮಾದೇನ ಸಂಪಾದೇಥ", ಎಂದರೆ "ಎಲ್ಲವೂ ಮುಪ್ಪಡರಿ ಮರೆಯಾಗುವಂಥದೇ, ಬದುಕಿರುವಾಗ ಜಾಗರೂಕತೆಯಿಂದ ಸಾಧನಮಾಡಿಕೊಳ್ಳಬೇಕು" ಎಂದು ಹೇಳಿ ಕಣ್ಣುಮುಚ್ಚಿದ. ಬುದ್ಧನ ಕಡೆಯ ಮಾತುಗಳನ್ನು ಮಹಾಪರಿನಿರ್ವಾಣಸೂತ್ರ ಉಳಿಸಿಕೊಂಡಿದೆ.

(೫)

ನಮಗೆ ಅಗತ್ಯವಾದ ವಿಚಾರ, ಸಿದ್ಧಾರ್ಥನನ್ನು ಸಂಬುದ್ಧನನ್ನಾಗಿ ಮಾರ್ಪಡಿಸಿದ ಸಂಬೋಧಿ ಎಂಥದು? ಎಂಬುದು. ಗಯೆಯ ಬಳಿ ಉರುವಿಲ್ವ ವನದಲ್ಲಿ ಅರಳಿಮರದಡಿಯಲ್ಲಿ ಧ್ಯಾನಮಾಡುತ್ತ ಕುಳಿತು ಅವನು ಕಂಡುಕೊಂಡುದಾದರೂ ಏನು? ಸಂಬೋಧಿಯೆನ್ನುವ ಪ್ರಸಂಗದ ತಾತ್ಪರ್ಯವೇನು? ಈ ಒಗಟನ್ನು ಬಿಡಿಸುವುದು ಸುಲಭವಲ್ಲ. ಬೌದ್ಧಧರ್ಮದ ಚೌಕಟ್ಟಿನಲ್ಲಿ ಸೇರಿರುವ ಪಂಥಗಳೆಲ್ಲ ಒಂದಲ್ಲ ಒಂದು ಬಗೆಯಲ್ಲಿ ಈ ಪ್ರಶ್ನೆಯನ್ನು ಎತ್ತಿ ಸಮಾಧಾನ ಕೊಡಲು ಯತ್ನಿಸಿವೆ. ಇದು ಸಹಜವೇ. ಏಕೆಂದರೆ ಬೌದ್ಧಧರ್ಮದ ಜೀವಾಳವೇ ಸಂಬೋಧಿ; ಬುದ್ಧನ ಬುದ್ಧತ್ವಕ್ಕೆ ಕಾರಣವಾದ ಅನುಭವ. ಮತ್ತು ಬೌದ್ಧ ಸಾಧನೆಯ ಉದ್ದೇಶವೇ ಈ ಅನುಭವವನ್ನು ಪಡೆದುಕೊಳ್ಳುವುದು. ನಮ್ಮಲ್ಲಿ ನಾವು ಸಂಬೋಧಿಯನ್ನು ಪಡೆದುಕೊಳ್ಳದೆ ಸಂಬೋಧಿಯ ಸ್ವಾರಸ್ಯವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಆ ಅನುಭವದ ಹರವನ್ನು ಅರಿತುಕೊಳ್ಳಲು ನೆರವಾಗುವಂಥ ಕೊಂಚ ಅನುಭವವಾದರೂ ನಮಗೆ ಇರಬೇಕು, ಇಲ್ಲವಾದರೆ ಅದು ಬರಿಯಮಾತು. "ವಾಚೋ ವಿಗ್ಲಪನಂ ಹಿ ತತ್".

ತಾನು ಪಡೆದುಕೊಂಡ ಅನುಭವವನ್ನು ಬುದ್ಧನೇ ತನ್ನ ಶಿಷ್ಯರಿಗೆ ತಿಳಿಸಿರುವ ಮಾತುಗಳು ತ್ರಿಪಿಟಕದಲ್ಲಿ ಸೇರಿವೆ. ಸಂಬೋಧಿ ಒದಗಿದನಂತರ

ಅವನು ಮಾಡಿದ ಮೊಟ್ಟಮೊದಲ ಪ್ರವಚನ 'ಧರ್ಮಚಕ್ರ ಪ್ರವರ್ತನಸೂತ್ರ', ವಿನಯಪಿಟಕ, ಸೂತ್ರಪಿಟಕಗಳೆರಡರಲ್ಲೂ ಈ ಸೂತ್ರ ಸೇರಿಬಂದಿದೆ. ಗಯೆಯಿಂದ ಬುದ್ಧನು ವಾರಾಣಸಿಗೆ ಹೋಗಿ ಅಲ್ಲಿನ ಋಷಿಪತನದ ಮೃಗದಾವ ಎಂಬಲ್ಲಿ (ಇದು ಈಗಿನ ಸಾರನಾಥ) ತನಗೆ ಮೊದಲೆ ಪರಿಚಿತರಾಗಿದ್ದ ಐವರು ಮುನಿಗಳೆದುರು ಮಾಡಿದ ಪ್ರವಚನ ಇದು. ಇದರಲ್ಲಿ ತನಗೊದಗಿದ ಅಪೂರ್ವ ಅನುಭವದ ಕೆಲವು ವಿವರಗಳಿವೆ; ಇಡೀ ಬೌದ್ಧ ದರ್ಶನದ ಸ್ವರೂಪವನ್ನೇ ಸಿದ್ಧಪಡಿಸಿದ ಆರ್ಯಸತ್ಯಗಳ, ಅಷ್ಟಾಂಗಮಾರ್ಗದ ಪ್ರಸ್ತಾಪವಿದೆ. ಪ್ರವಚನದ ಕೊನೆಯಲ್ಲಿ ತನಗೆ ಜ್ಞಾನವೂ ದರ್ಶನವೂ ಒದಗಿದುವೆಂದೂ, ಅದರಿಂದ ದಿಟವಾಗಿ ಚಿತ್ತದ ಬಿಡುಗಡೆಯಾಯಿತೆಂದೂ, ಮುಂದಿನ ಜನ್ಮಗಳು ಇಲ್ಲವಾದುವೆಂದೂ ಹೇಳಿಕೊಂಡಿದ್ದಾನೆ. ಪಾಳಿಯ ಮೂಲ ಹೀಗಿದೆ—

> "ಅನುತ್ತರಂ ಸಮ್ಮಾಸಂಬೋಧಿಂ ಅಭಿಸಂಬುದ್ಧೋ ತಿ ಪಚ್ಚಜ್ಞಾಸಿಂ, ಞಾಣಂ ಚ ಪನ ಮೇ ದಸ್ಸನಂ ಉದಪಾದಿ, ಅಕುಪ್ಪಾ ಮೇ ಚೇತೋವಿಮುತ್ತಿ, ಅಯಂ ಅಂತಿಮಾ ಜಾತಿ, ನತ್ಥಿದಾನಿ ಪುನಬ್ಭವೋ ತಿ"

ಇಲ್ಲಿ ಸಂಬೋಧಿಯನ್ನು 'ಅನುತ್ತರ' ಎಂದರೆ ಅದಕ್ಕಿಂತ ಮಿಗಿಲಾದುದು ಇಲ್ಲ, ಎಂದು ಕರೆಯಲಾಗಿದೆ; 'ಸಮ್ಯಕ್' ಎಂದರೆ ಸಂಪೂರ್ಣವಾದುದು, ಎಲ್ಲ ಭಾಗಗಳಲ್ಲೂ ಚೆನ್ನಾದುದು ಎನ್ನಲಾಗಿದೆ. ಬೋಧಿಯೆಂದರೆ ಸರಿಯಾದ ಅರಿವು, ತಿಳುವಳಿಕೆ. ಸಂಬೋಧಿಯೆಂದರೆ ನೇರವಾದ ಅರಿವು, ಆಳವಾದ ತಿಳುವಳಿಕೆ. ಮನಸ್ಸಿನಿಂದ, ಇಂದ್ರಿಯಗಳಿಂದ ತಿಳಿದುಕೊಳ್ಳುವುದಲ್ಲ; ಇಡೀ ಬದುಕಿನಲ್ಲಿ ಮೂಡಿಬರುವ ಎಚ್ಚರ.

ಸುತ್ತನಿಪಾತದಲ್ಲಿ ಬುದ್ಧನು ಸೇಲನೆಂಬ ಬ್ರಾಹ್ಮಣನಿಗೆ ತಾನು ಪಡೆದ ಸಂಬೋಧಿಯನ್ನು ಕುರಿತು ಹೇಳುವ ಮಾತು, ಮೇಲಿನ ಧರ್ಮಚಕ್ರಪ್ರವರ್ತನದಲ್ಲಿ ಬರುವ ವಿವರವನ್ನೆಲ್ಲ ಒಳಗೊಳ್ಳುತ್ತದೆ—

> ಅಭಿಜ್ಞೇಯ್ಯಂ ಅಭಿಜ್ಞಾತಂ, ಭಾವೇತಬ್ಬಂ ಚ ಭಾವಿತಂ |
> ಪಹಾತಬ್ಬಂ ಪಹೀನಂ ಮೇ, ತಸ್ಮಾ ಬುದ್ಧೋಸ್ಮಿ ಬ್ರಾಹ್ಮಣ ||

"ನಾನು ತಿಳಿದುಕೊಳ್ಳಬೇಕಾದುದನ್ನೆಲ್ಲ ತಿಳಿದುಕೊಂಡೆ, ಮೂಡಿಸಿಕೊಳ್ಳಬೇಕಾದುದನ್ನೆಲ್ಲ ಮೂಡಿಸಿಕೊಂಡೆ, ಕಳೆದುಕೊಳ್ಳಬೇಕಾದುದನ್ನೆಲ್ಲ ಕಳೆದುಕೊಂಡೆ.

ಹೀಗೆ ನಾನು ಬುದ್ಧನಾದೆ." ಬದುಕಿನಲ್ಲಿ ತಿಳುವಳಿಕೆಯಿಲ್ಲದೆ ಪಡುವ ಬವಣೆ ಹೆಚ್ಚಿನದು; ತಿಳಿಯದೆ ಇರುವುದರಿಂದ ಕಳೆದುಕೊಳ್ಳಬೇಕಾದುದನ್ನೆಲ್ಲ ಉಳಿಸಿ ಕೊಳ್ಳುತ್ತೇವೆ, ಮೂಡಿಸಿಕೊಳ್ಳಬೇಕಾದುದನ್ನು ಬಿಟ್ಟುಬಿಡುತ್ತೇವೆ. ಹೀಗಾಗಿ ನಾವು ಲೋಕದ ಬಲೆಯಲ್ಲಿ ಸಿಲುಕಿಕೊಂಡು ಬದ್ಧರಾಗುತ್ತೇವೆ. ತಿಳುವಳಿಕೆ ಮೂಡಿದರೆ ಬುದ್ಧರು.

ಬುದ್ಧಧರ್ಮದ ನಾಲ್ಕು ಸತ್ಯಗಳನ್ನು ಈ ಚೌಕಟ್ಟಿನಲ್ಲಿ ಅಳವಡಿಸಿರು ವುದನ್ನು ಧರ್ಮಚಕ್ರ ಪ್ರವರ್ತನಸೂತ್ರದಲ್ಲಿ ಕಾಣುತ್ತೇವೆ—ತಿಳಿದುಕೊಳ್ಳ ಬೇಕಾದುದು (ಅಭಿಜ್ಞೇಯಂ) ದುಃಖವೆನ್ನುವ ಮೊದಲನೆಯ ಆರ್ಯಸತ್ಯ. ಕಳೆದುಕೊಳ್ಳಬೇಕಾದುದು (ಪಹಾತಬ್ಬಂ) ದುಃಖಸಮುದಯವೆನ್ನುವ ಎರಡ ನೆಯ ಸತ್ಯ. ಲೋಕದ ವ್ಯವಹಾರದಲ್ಲಿ ನೆಮ್ಮದಿಯೆಂದಾಗಲೀ ಸುಖವೆಂದಾ ಗಲೀ ಇರದು; ಇದಕ್ಕೆ ಕಾರಣವಾದುದು ಆಸೆ, ಅಭಿಮಾನ. ಇದೇ ದುಃಖ ಸಮುದಯ. ಇದು ಬಿಡತಕ್ಕದ್ದು; ನಾವು ಇದನ್ನು ಬಿಡದೆ ಇರುವುದೇ ದುಃಖಕ್ಕೆ ಕಾರಣ. ದುಃಖನಿರೋಧ ಅಥವಾ ನಿರ್ವಾಣ (ಕದಲದ ನೆಮ್ಮದಿ) ಎನ್ನುವ ಮೂರನೆಯ ಸತ್ಯ ಸಾಕ್ಷಾತ್ಕರಿಸಿಕೊಳ್ಳಬೇಕಾದುದು (ಸಚ್ಛಿಕಾತಬ್ಬಂ), ಎಂದರೆ ನಮ್ಮ ಬಾಳುವೆಯಲ್ಲಿ ನಿಲ್ಲಬೇಕಾದುದು. ಇದಕ್ಕೆ ದಾರಿಯಾಗಿ, ಸಾಧನೆಯಾಗಿ ನಾಲ್ಕನೆಯ ಸತ್ಯ—'ದುಃಖನಿರೋಧಗಾಮಿನೀ ಪಟಿಪದಾ'. ಇದು ಬುದ್ಧನು ತಾನು ಅನುಸರಿಸಿದ, ನಮಗೆ ತಿಳಿಯಪಡಿಸಿದ ಅಷ್ಟಾಂಗಿಕಮಾರ್ಗ. ಇದೇ ಬೌದ್ಧ ಸಾಧನೆ. ಇದನ್ನು ಮೂಡಿಸಿಕೊಳ್ಳಬೇಕಾದುದು (ಭಾವೇತಬ್ಬಂ) ಎಂದು ಕರೆದಿದ್ದಾರೆ. ಒಬ್ಬೊಬ್ಬರೂ ತಂತಮ್ಮ ಬದುಕಿನಲ್ಲಿ ತಾವೇ ಸಾಧಿಸಿ ಕೊಳ್ಳಬೇಕಾದುದು.

ಸಂಬೋಧಿಯ ಪ್ರಸಂಗವನ್ನು ಉಲ್ಲೇಖಿಸುವ ಇನ್ನೊಂದು ಮಾತು 'ಉದಾನ' ರೂಪದಲ್ಲಿದೆ. ಗೌತಮನಿಗೆ ಸಂಬೋಧಿ ಒದಗಿದೊಡನೆ ಅವನ ಬಾಯಿಂದ ತಾನಾಗಿ ಹೊರಬಂದ ಉದ್ಗಾರ—

"ಗಹಕಾರಕ ದಿಟ್ಠೋಸಿ ಪುನ ಗೇಹಂ ನ ಕಾಹಸಿ |
ಸಬ್ಬಾ ತೇ ಫಾಸುಕಾ ಭಗ್ಗಾ, ಗಹಕೂಟಂ ವಿಸಂಖತಂ ||"

ಇದರ ತಾತ್ಪರ್ಯ—ಮನೆಯನ್ನು ಕಟ್ಟುತ್ತಿರುವವನ್ನು ಕಂಡೆ, ಇನ್ನು ಮುಂದೆ ಮನೆಯನ್ನು ಕಟ್ಟಗೊಡಿಸುವುದಿಲ್ಲ, ಮನೆಯ ಕಟ್ಟುಗಳೆಲ್ಲ ಕಳಚಿಬಿದ್ದುವು,

ಮನೆಯ ದೂಲವೇ ಬಿದ್ದು ಹೋಯಿತು; ಇನ್ನು ಮತ್ತೆ ಮನೆ ಕಟ್ಟುವ ಬಗೆ ಹೇಗೆ? ಇಲ್ಲಿ ಮನೆಯೆನ್ನುವುದು ಲೌಕಿಕವ್ಯವಹಾರದಲ್ಲಿ ನಿಂತ ಜೀವ. ಈ ಮನೆಯನ್ನು ಕಟ್ಟುವವನು ನಮ್ಮ ವ್ಯವಹಾರದ ಅಡಿಯಲ್ಲಿರುವ ಬಯಕೆ, ಆಸೆ, ಅಭಿಮಾನ. ಮನೆ ದುಃಖವಾದರೆ, ಮನೆಕಟ್ಟುವವನು ದುಃಖಸಮುದಯ. ಮೊದಲನೆಯದನ್ನು ಬುದ್ಧ ಕಂಡ, ಎರಡನೆಯದನ್ನು ದೂರ ಅಟ್ಟಿದ. ಅದು ಅಭಿಜ್ಞೇಯಂ, ಇದು ಪಹಾತಬ್ಬ. ಬಾಳುವೆಗೆ ಆಸರೆಯಾಗಿ ನಿಂತಿರುವ ತೃಷ್ಣೆಯೇ ಮನೆಯ ದೂಲ; ಇದನ್ನೇ ಹೊರಗಟ್ಟಿದ ಮೇಲೆ ಉಳಿದ ಕಟ್ಟುಗಳು ಉಳಿಯುವುದು ಹೇಗೆ? ಈ ಗಾಹೆಯಲ್ಲಿಯೇ ಮುಂದೆ "ಇದರಿಂದಾಗಿ ಮನಸ್ಸು ನೆಮ್ಮದಿಯಾಯಿತು, ಆಸೆ ನೊಂದಿಹೋಯಿತು" (ವಿಸಂಖಾರಗತಂ ಚಿತ್ತಂ, ತಣ್ಹಾನಂ ಖಯಮಜ್ಝಗಾ) ಎಂಬ ಮಾತು ಬರುತ್ತದೆ.

ಧರ್ಮಚಕ್ರ ಪ್ರವರ್ತನಸೂತ್ರದಲ್ಲಿ ತನಗೆ ಒದಗಿದ ಅನುಭವವನ್ನು ವಿವರಿಸುತ್ತ ಬುದ್ಧ—ಮೊದಲು ತನಗೆ ತಿಳಿಯದಿದ್ದುದು ಈಗ ತಿಳಿಯಿತು, ಹೊಸ ಕಾಣ್ಕೆ ಮೂಡಿತು, ತಿಳುವಳಿಕೆ ಒದಗಿತು, ಬೆಳಕು ಕಂಡಿತು—ಎಂದನು. ಪಾಳಿಯ ಮೂಲದಲ್ಲಿ ಸೌಂದರ್ಯವೂ ಸ್ವಾರಸ್ಯವೂ ಇವೆ—

> ಪುಬ್ಬೇ ಅನನುಸ್ಸುತೇಸು ಧಮ್ಮೇಸು ಚಕ್ಖುಂ ಉದಪಾದಿ,
> ಞಾಣಂ ಉದಪಾದಿ, ಪಞ್ಞಾ ಉದಪಾದಿ, ವಿಜ್ಜಾ ಉದಪಾದಿ,
> ಆಲೋಕೋ ಉದಪಾದಿ"

ಒಂದೇ ಅನುಭವವನ್ನೇ ಚಕ್ಷು, ಜ್ಞಾನ, ಪ್ರಜ್ಞಾ, ವಿದ್ಯಾ, ಆಲೋಕ ಎಂದೆಲ್ಲ ಕರೆದಿದ್ದಾನೆ. ಅನುಭವದ ಆಳವನ್ನೂ ಹರವನ್ನೂ ಸೂಚಿಸುವ ಪದಗಳು ಇವು. ಇಲ್ಲಿ ನಾವು ಗಮನಿಸಬೇಕಾದುದು ಬುದ್ಧನಿಗೆ ಹೊಸದೃಷ್ಟಿಯೊಂದು ಮೂಡಿಕೊಂಡು ಬಂದಿತೆನ್ನುವುದನ್ನು. ಹೊರಗಿನ ಜಗತ್ತು ಮಾರ್ಪಡಲಿಲ್ಲ; ಶರೀರದ ಧರ್ಮವೇನು ಬದಲಾಗಲಿಲ್ಲ. ನಮ್ಮ ನೋಟದಲ್ಲಿರುವಂತೆ ಸಿದ್ಧಾರ್ಥನ ನೋಟದಲ್ಲೂ ಇಕ್ಕಟ್ಟು ಇದ್ದಿತು; ಕಣ್ಣಿನ ಮುಂದೆ ತೆರೆಯಿದ್ದಿತು; ದೃಷ್ಟಿಯಲ್ಲಿ ದೌರ್ಬಲ್ಯವೂ ದೋಷವೂ ಇದ್ದುವು, ಈಗ ಇವೆಲ್ಲ ಹರಿದುವು, ಇದ್ದುದನ್ನು ಇದ್ದಂತೆಯೇ ಕಾಣುವುದು ಸಾಧ್ಯವಾಯಿತು; ಹೊರಗಿನ ಅಥವಾ ಒಳಗಿನ ಯಾವ ಆತಂಕವೂ ಇಲ್ಲದೆ ನೋಟ ಹಸನಾಯಿತು, ಹರವಾಯಿತು. ಕತ್ತಲೆಯಿದ್ದಲ್ಲಿ

ಈಗ ಬೆಳಕು ಮೂಡಿತು; ಸಂಕೋಚವಿದ್ದಲ್ಲಿ ಈಗ ವಿಸ್ತಾರವಾಯಿತು. ಇದು ಸಂಬೋಧಿಯ ಅನುಭವವನ್ನು ಬುದ್ಧನೇ ಬಣ್ಣಿಸಿರುವ ಬಗೆ.

(೬)

ಬುದ್ಧನು ಈ ಸ್ಥಿತಿಯನ್ನು ಮುಟ್ಟುವ ಮುನ್ನ ಅವನು ಪಟ್ಟ ಬವಣೆಯನ್ನು ತ್ರಿಪಿಟಕಗ್ರಂಥಗಳು ವಿವರಿಸುತ್ತವೆ. ಅವನು ಮನೆಯನ್ನು ಬಿಟ್ಟು ಹೊರಟದ್ದು 'ಯೋಗಕ್ಖೇಮಸ್ಸ ಪತ್ತಿಯಾ', ಯೋಗಕ್ಷೇಮದ ಪ್ರಾಪ್ತಿಗಾಗಿ. ಯೋಗಕ್ಷೇಮವೆಂದರೆ ರೂಢಿಯ ಅರ್ಥ ನೆಮ್ಮದಿ. ಯೌಗಿಕವಾದ ಅರ್ಥ ಇಲ್ಲದ್ದನ್ನು ಪಡೆದುಕೊಳ್ಳುವುದು (ಯೋಗ), ಪಡೆದುಕೊಂಡದ್ದನ್ನು ಕಾಪಾಡಿಕೊಳ್ಳುವುದು (ಕ್ಷೇಮ). ಕತ್ತಲೆಯಲ್ಲಿ ಅಲೆದಾಡುವ ನಮಗೆ, ಬೆಂಕಿಯ ತಾಪದಲ್ಲಿ ಬೇಯುತ್ತಿರುವ ನಮಗೆ ಇಲ್ಲವಾದದ್ದು ಬೆಳಕು, ತಂಪು. ಇದನ್ನು ಪಡೆದುಕೊಳ್ಳುವುದೇ ಬೋಧಿ; ಇದೇ ನೆಮ್ಮದಿ. ಅದು ನಮ್ಮಿಂದ ಎಂದೂ ಜಾರಿಹೋಗದಂತೆ ಉಳಿಸಿಕೊಳ್ಳುವುದು ಸಂಬೋಧಿ; ಕದಲದ ನೆಮ್ಮದಿ.

ಸಿದ್ಧಾರ್ಥನು ಇದನ್ನೇ ಅರಸುತ್ತ ಮನೆಬಿಟ್ಟು ಹೊರಟದ್ದು. ಸುಮಾರು ಏಳುವರ್ಷಗಳ ನಂತರ ಅದನ್ನು ಪಡೆದ. ಪಾಳಿ ಗ್ರಂಥಗಳಲ್ಲಿ ಈ ಏಳುವರ್ಷಗಳ ಕಾಲ ಮಾರನು ಅವನನ್ನು ಕಾಡಿದನೆಂದು ವರ್ಣನೆಯಿದೆ. ಮಾರನೆಂದರೆ ಲೋಕದ ತತ್ವ; ಈ ಪ್ರಪಂಚದ ಅಭಿಮಾನವನ್ನು ಮುಂದಿರಿಸಿಕೊಂಡು, ಆಸೆಯ ಹಂದರದ ಮೇಲೆ ಬದುಕನ್ನು ಹರಡಿಕೊಳ್ಳುವ ಬಗೆ. ಕತ್ತಲೆಯೇ ಒಳಿತು, ಬೆಂಕಿಯ ತಾಪವೇ ಹಿತ, ತಿಳುವಳಿಕೆ ಇಲ್ಲದಿರುವುದೇ ನೆಮ್ಮದಿ, ಬಾಳಿನ ಕಟ್ಟುಗಳೇ ಆಕರ್ಷಕ ಎಂಬ ನಿಲುವು ನಮಗೆಲ್ಲ ಉಂಟು; ನಮ್ಮ ಅರಿವಿಗೆ ಬಾರದಿದ್ದರೂ, ಹಾಗೆಂದು ಹೇಳಿಕೊಳ್ಳಲು ನಮ್ಮ ಅಭಿಮಾನ ಒಪ್ಪದಿದ್ದರೂ ಬದುಕಿನ ಬಯಕೆ ನಮ್ಮಲ್ಲಿ ಬೇರೂರಿ ನಿಂತಿದೆ. ಈ ಬಯಕೆಯೇ ಮಾರ; ಇದೇ ಸಂಬೋಧಿಯ ಹಗೆ. ಅವನ ಸೇನೆ ಇಂದ್ರಿಯ ಸುಖಗಳು, ಹಸಿವು-ಬಾಯಾರಿಕೆಗಳು, ಆಸೆಗಳು, ಆಲಸ್ಯ-ಜಾಡ್ಯಗಳು, ಸಂಶಯ-ಭೀತಿಗಳು, ದುರಾಸೆ-ದೌರ್ಮನಸ್ಯಗಳು, ಅಭಿಮಾನ-ಗರ್ವಗಳು, ಕೀರ್ತಿ-ಸಂಪತ್ತುಗಳು, ನಿರ್ದಯೆ-ವಂಚನೆಗಳು. ಈ ಪಟ್ಟಿ ಸುತ್ತನಿಪಾತದಲ್ಲಿ ಸೇರಿರುವ ಪ್ರಧಾನ ಸೂತ್ರದಲ್ಲಿ ಬರುತ್ತದೆ. ತಿಳುವಳಿಕೆ ಇಲ್ಲದವರ ನೆಂಟ ಮಾರ; 'ಪ್ರಮತ್ತ ಬಂಧು'.

ಮಾರನನ್ನು 'ನಮುಚಿ' ಎಂದೂ ಕರೆಯುತ್ತಾರೆ. 'ನ-ಮುಚಿ' ಯೆಂದರೆ "ನಿನ್ನನ್ನು ಬಿಟ್ಟುಕೊಡಲಾರೆ" ಎಂದರ್ಥ. ಮಾರನು ನಮ್ಮನ್ನು ಮೆಟ್ಟನಿಂತಿದ್ದು, ನಾವು ಅವನ ಹಿಡಿತದಿಂದ ದೂರವಾಗಲು ಬಿಡುವುದಿಲ್ಲ. ಸಿದ್ಧಾರ್ಥನು ಯೋಗಕ್ಷೇಮವನ್ನು ಅರಸಿ ಮನೆಯಿಂದ ಹೊರಗಾದಾಗ ಮಾರನ ಕಟ್ಟನಿಂದ ಕಳಚಿಕೊಂಡು ಹೊರಟ. ಮಾರನು ಅವನನ್ನು ಬಿಡಲೀಸದೆ ಅವನ ಬೆನ್ನಟ್ಟ ಬಂದ. ಲೋಕದ ಬಯಕೆಯಿಂದ ಜಾರಿಕೊಳ್ಳಲು ಲೋಕ ಬಿಡು ತ್ತದೆಯೆ? ಸಿದ್ಧಾರ್ಥನನ್ನು ಮಾರ ಹೆಜ್ಜೆ ಹೆಜ್ಜೆಗೆ ಕಾಡಿದ. ಮತ್ತೆ ಮತ್ತೆ ಅವನೊಂದಿಗೆ ವಾದಿಸಿದ. "ಜೀವ ಭೋ ಜೀವಿತಂ ಸೇಯ್ಯೋ" 'ಬದುಕು, ಸಿದ್ಧಾರ್ಥ, ಬದುಕಿದರೇ ಸುಖ; ಬದುಕನ್ನು ಬಿಟ್ಟು ಓಡಬೇಡ' ಎಂದು ಹೇಳಿದ. 'ನೀನು ಅರಸುತ್ತಿರುವ ಸಂಬೋಧಿ ಅಷ್ಟು ಸುಲಭವಾಗಿ ದೊರೆಯುವುದಲ್ಲ, ನೀನು ಪಡುವ ಬವಣೆಯೆಲ್ಲ ವ್ಯರ್ಥವಾಗುವುದು ಖಂಡಿತ. ಬರಿದೆ ಬದುಕನ್ನು ಹಾಳುಮಾಡಿಕೊಳ್ಳುವೆ' ಎಂದು ಎಚ್ಚರಿಸಿದ. 'ಸಂಬೋಧಿಯನ್ನು ಪಡೆದು ಕೊಂಡು ನೀನು ಮಾಡುವುದಾದರೂ ಏನು? ಸುಮ್ಮನೆ ಹಿಂದಿರುಗು. ನಿನ್ನನ್ನು ರಾಜನನ್ನಾಗಿ ಮಾಡುತ್ತೇನೆ. ನಿನಗೆ ಎಲ್ಲ ಸುಖವನ್ನೂ ಕೊಡುತ್ತೇನೆ' ಎಂದು ಪುಸಲಾಯಿಸಿದ.

ಮಾರನು ಹೊರಗಣ 'ದುಮ್ಮನೋ ಯಕ್ಖೋ' ಎಂಬ ವರ್ಣನೆ ಯಿದ್ದರೂ ದಿಟವಾಗಿ ಅವನು ಸಿದ್ಧಾರ್ಥನ ಮನಸ್ಸಿನೊಳಗೇ ಅಡಗಿದ್ದು, ಅವನು ಕೈಗೊಂಡ ಕೆಲಸಕ್ಕೆಲ್ಲ ಅಡ್ಡಿಯನ್ನು ಒದಗಿಸಲು ಸಿದ್ಧನಾಗಿದ್ದ ತತ್ವ; ಬದುಕಿನ ಬಯಕೆ. ಮನೆಯಿಂದ ಹೊರಗಾದ ಸಿದ್ಧಾರ್ಥನ ಮನಸ್ಸಿನಲ್ಲೇ ತಾನು ಅರಸುತ್ತಿರುವ ನೆಮ್ಮದಿಯನ್ನು ಕುರಿತು ಸಂದೇಹ ತೋರಿತು; ಇದು ಸಾಧ್ಯವೇ ಎಂಬ ಅಳುಕೂ ಒಮ್ಮೊಮ್ಮೆ ಕಾಣಿಸಿಕೊಂಡಿತು, ಸಾಮಾನ್ಯವಾಗಿ ರಾಜಪುತ್ರರು ಬಾಳುವಂತೆ ತಾನೂ ಬಾಳಬಾರದೇಕೆ ಎನ್ನಿಸಿತು; ನೆಮ್ಮದಿಯ ಪ್ರಯೋಜನವೇನು ಎಂಬ ಸಂಶಯವೂ ಕಾಡಿತು. ಆರಾಢ-ಕಾಲಾಮ ಮತ್ತು ರುದ್ರಕ-ರಾಮಪುತ್ರರ ಬಳಿ ಯೋಗಾಭ್ಯಾಸ ಮಾಡಿ ನೆಮ್ಮದಿಯನ್ನು ಪಡೆಯು ದಿದ್ದಾಗ ಈ ಒತ್ತಡವನ್ನು ಅವನು ಅನುಭವಿಸಿರಬೇಕು. ಉರುವಿಲ್ವದಲ್ಲಿ ಕಠಿಣ ತಪಶ್ಚರ್ಯೆಯನ್ನು ನಡೆಸಿ ಮೈಯೆಲ್ಲ ಬರಿಯ ಮೂಳೆಯ ಚೀಲವಾಗಿ, ಶಕ್ತಿಯೆಲ್ಲ ಉಡುಗಿ ಹೋಗಿ, ಕಣ್ಣು ಕತ್ತಲೆಗೂಡಿ, ಮನಸ್ಸು ತಲ್ಲಣಿಸಿ, ಎದ್ದೊಡನೆ ನಿಲ್ಲಲಾರದೆ ದೊಪ್ಪನೆ ಬಿದ್ದುದನ್ನು ತಾನೇ ಬಣ್ಣಿಸಿದ್ದಾನೆ. ಇಂಥ

ಸ್ಥಿತಿಯಲ್ಲಿ ತನ್ನ ಅರಸಾಟ ಅರ್ಥವಿಲ್ಲದ್ದು ಎಂಬ ಆತಂಕ ಮೂಡಿರುವುದು ಸಾಧ್ಯ.

ಆದರೆ ಮಾರನಿಗೆ ಸಿದ್ಧಾರ್ಥ ಸೋಲಲಿಲ್ಲ. ಮೂಡಿಬಂದ ಯಾವ ಸಂಶಯವಾಗಲೀ, ಒದಗಿಬಂದ ಯಾವ ಆತಂಕವಾಗಲೀ, ಕಾಣಿಸಿಕೊಂಡ ಯಾವ ಪ್ರಲೋಭನೆಯಾಗಲೀ ಸಿದ್ಧಾರ್ಥನ ಸಂಕಲ್ಪವನ್ನು ಮುರಿಯಲಿಲ್ಲ. ಅವನು ಮಾರನಿಗೆ ಹೇಳಿದನಂತೆ—'ಪಸ್ಸ ಸತ್ತಸ್ಸ ಸುದ್ಧತಂ' ಎಂದರೆ, 'ನನ್ನ ಶುದ್ಧಿಯನ್ನು ನೋಡು, ನಿನಗೆ ನಾನು ಸೋಲುವುದಿಲ್ಲ' ಎಂದು ತಾತ್ಪರ್ಯ. ಸಂಬೋಧಿ ಒದಗಿದ ಮೇಲೆ ಮಾರನ ಸೇನೆ ಚೆಲ್ಲಾಪಿಲ್ಲಿಯಾಗಿ ಚದುರಿ ಓಡಿಹೋಯಿತಂತೆ. ನಿರಾಶೆಗೊಂಡ ಮಾರ ನಿಟ್ಟುಸಿರು ಬಿಡುತ್ತ ಹೇಳಿದನಂತೆ—

"ಸತ್ತವಸ್ಸಾನಿ ಭಗವಂತಂ ಅನುಬಂಧಿಂ ಪದಾಪದಂ |
ಓತಾರಂ ನಾಧಿಗಚ್ಛಿಸ್ಸಂ ಸಂಬುದ್ಧಸ್ಸ ಸತೀಮತೋ ||"

"ಇವನನ್ನು ಏಳುವರ್ಷಗಳು ಎಡೆಬಿಡದೆ, ಅಡಿಗಡಿಗೆ ಕಾಡಿದ್ದೇನೆ. ಒಂದು ಗಳಿಗೆಯಾದರೂ ನಾನು ಇವನೊಳಗೆ ಇಳಿಯಲಾಗಲಿಲ್ಲ. ಎಂದೂ ಎಚ್ಚರವಾಗಿಯೇ ಇದ್ದ!". ಅಲಸಿಕೆಯಿಂದ ಅಥವಾ ಆಕರ್ಷಣೆಯಿಂದ ಮನಸ್ಸು ಎಚ್ಚರ ತಪ್ಪಿದರೆ, ಸಂಕಲ್ಪದ ಆಯ ತಪ್ಪಿದರೆ, ಸಂಯಮ ತುಸುವಾದರೂ ಜಾರಿದರೆ ಅದು ಮಾರನಿಗೆ ಒಳನುಗ್ಗಲು ಅವಕಾಶ. ಒಮ್ಮೆ ಅವನು ಒಳಬಂದನೆಂದರೆ ಅವನ ಹಿಡಿತದಿಂದ ತಪ್ಪಿಸಿಕೊಳ್ಳುವುದು ಕಷ್ಟ. ಸಿದ್ಧಾರ್ಥನಲ್ಲಿ ತನಗೆ ಇಂಥ ಅವಕಾಶ ಒದಗೀತು ಎಂದು ಮಾರ ಏಳುವರ್ಷಗಳು ಕಾದ; ಒಂದು ಬಾರಿಯಾದರೂ ಸಿದ್ಧಾರ್ಥ ಎಚ್ಚರ ತಪ್ಪಲಿಲ್ಲ. ಸಂಬೋಧಿ ಪಡೆಯಲು ಈ ಸ್ಥೈರ್ಯ ಅಗತ್ಯವಾದುದು ಎಂದು ಸೂಚಿಸುವುದೇ ಮಾರ-ಸಿದ್ಧಾರ್ಥರ ಸೆಣಸಾಟವನ್ನು ವಿವರಿಸಿರುವುದರ ಉದ್ದೇಶ.

ಮಾರನನ್ನು ಪರಾಭವಗೊಳಿಸಲೆಂದೇ ಸಿದ್ಧಾರ್ಥ ಮನೆಬಿಟ್ಟು ಹೊರಟದ್ದು. ಮನೆಯನ್ನು ಬಿಟ್ಟರೇನು, ಮನಸ್ಸು ಬಿಡಬೇಕಲ್ಲ? ಮನಸ್ಸಿನಿಂದ ಬಿಡಿಸಿಕೊಳ್ಳಲು ಏಳುವರ್ಷಗಳು ಹಿಡಿಸಿದುವು. ತನ್ನ ದಾರಿಯನ್ನು ತಾನೇ ನೇವರಿಸಿಕೊಂಡು, ಸರಿಪಡಿಸಿಕೊಂಡು, ಸಿದ್ಧಪಡಿಸಿಕೊಂಡು ಸಿದ್ಧಾರ್ಥ ಮುಂದರಿಯಬೇಕಾಗಿದ್ದಿತು. ಆವರೆಗೆ ಸಂಬೋಧಿಗೆ ಸಿದ್ಧವಾದ ನೇರವಾದ ದಾರಿಯಿರಲಿಲ್ಲ.

ಸಂಬೋಧಿಯನ್ನು ಪಡೆದುಕೊಂಡ ಮೇಲೆ, ತಾನು ನಡೆದುಬಂದ ದಾರಿಯನ್ನು ಮತ್ತೆ ಪರಿಶೀಲಿಸಿದ. ಸಂಬೋಧಿಯ ಸ್ವಾರಸ್ಯವನ್ನು ಅರಿತುಕೊಂಡ. ಹಲವಾರು ದಿನಗಳು ತಾನು ಪಡೆದುಕೊಂಡ ನೆಮ್ಮದಿಯನ್ನು ತಾನೇ ಅನುಭವಿಸಿದ. ಅದರ ಆಳ-ಅಗಲಗಳನ್ನು ಗುರುತಿಸಿಕೊಂಡ. ಅನಂತರ, ತಾನು ಪಡೆದುಕೊಂಡ ಸಂಬೋಧಿಯನ್ನು ಇತರರೂ ಪಡೆಯಬಹುದಲ್ಲ ಎಂದು ಅವನಿಗನಿಸಿತು. ತನ್ನಂತೆ ಬವಣೆ ಪಡುತ್ತಿರುವ ಮಂದಿ ಲೋಕದಲ್ಲಿ ಇದ್ದಾರೆ, ಅವರು ನೆಮ್ಮದಿಯನ್ನು ಬಯಸರೆ? ದಾರಿಕಾಣದೆ ಅಲೆದಾಡುತ್ತಿದ್ದಾರೆ; ತಾನು ಸಿದ್ಧಪಡಿಸಿಕೊಂಡ ದಾರಿಯನ್ನು ಅವರಿಗೆ ತಿಳಿಯಪಡಿಸಿದರೆ ಅವರಿಗೆ ಒಳಿತಲ್ಲವೆ? ಎಂದುಕೊಂಡ.

ಈ ಆಲೋಚನೆಯಲ್ಲಿದ್ದಾಗ ಮಾರ ಮತ್ತೆ ಬಂದನಂತೆ. ಇದು ಮಾರನಿಗೂ ಬುದ್ಧನಿಗೂ ನಡೆದ ಕಡೆಯ ಭೇಟಿ. ಈಗ ಮಾರ ಬಂದು, "ಸಂಬೋಧಿಯನ್ನೇನೋ ಪಡೆದುಕೊಂಡೆ. ನೆಮ್ಮದಿಯಿಂದ ತೀರಿಕೊಂಡರಾಯಿತು, ಬದುಕನ್ನು ಮುಂದರಿಸಿ, ಮತ್ತೆ ಬವಣೆಪಡಬೇಡ. ನಿನ್ನ ಬಾಳುವೆಯನ್ನು ಕೊನೆಗಾಣಿಸಿ ಪರಿನಿರ್ವಾಣವನ್ನು ಪಡೆ" ಎಂದು ಸಲಹೆಮಾಡಿದ. ಬುದ್ಧನ ಮನಸ್ಸಿನಲ್ಲೇ ಸಂಶಯವೊಂದು ಎದ್ದಿತಂತೆ—"ನಾನು ಕಷ್ಟಪಟ್ಟು ಪಡೆದುಕೊಂಡ ಸಂಬೋಧಿ ಎಲ್ಲರಿಗೂ ಸಾಧ್ಯವೆ? ಎಲ್ಲರಿಗೂ ರುಚಿಸುತ್ತದೆಯೆ? ಜನ ಸುಖವನ್ನು ಬಯಸುವವರು, ಸುಲಭದ ದಾರಿ ಹಿಡಿಯುವವರು. ಈ ಕಷ್ಟದ ದಾರಿ ಅವರಿಗೆ ಹಿಡಿಸೀತೆ? ನಾನು ಮತ್ತೆ ವ್ಯವಹಾರಕ್ಕಿಳಿದು ಸಂಬೋಧಿಯನ್ನು ಬೋಧಿಸತೊಡಗಿದರೆ ನನಗೆ ಬರಿ ಆಯಾಸವಾದೀತು ಅಷ್ಟೆ. ಸುಮ್ಮನೆ ಒಂಟಿಯಾಗಿ ನನ್ನ ಪಾಡಿಗೆ ನಾನು ನೆಮ್ಮದಿಯಿಂದ ಇರುವುದು ಒಳಿತು" ಎಂದುಕೊಂಡನಂತೆ. ಎಂದರೆ ಮಾರನ ಹವಣಿಕೆಗೆ ಓಗೊಟ್ಟಂತಾಯಿತು. ಸಿದ್ಧಾರ್ಥನೇನೋ ತನ್ನ ಹಿಡಿತದಿಂದ ತಪ್ಪಿಸಿಕೊಂಡ; ಅವನನ್ನು ನೋಡಿ ಇತರರೂ ತಪ್ಪಿಸಿಕೊಂಡು ಹೋಗದಿರಲಿ ಎಂದು ಮಾರನ ಆತಂಕ.

ಕಡೆಗೂ ಮಾರನದೇ ಮೇಲುಗೈಯಾಯಿತು ಎಂದುಕೊಳ್ಳುವ ವೇಳೆಗೆ ಬ್ರಹ್ಮ-ಸಹಂಪತಿಯು ಬುದ್ಧನಬಳಿಗೆ ಬಂದು "ಎಲ್ಲರ ಕಣ್ಣೂ ಕೊಳೆಯಿಂದ ಪೂರಾ ತುಂಬಿರುವುದಿಲ್ಲ. ಕೆಲವರು ಅಷ್ಟಿಷ್ಟು ನೋಡಬಲ್ಲರು. ನೀನು ಅವರಿಗೆ ದಾರಿ ತೋರಿಸಿದೆಯಾದರೆ ಅವರೂ ನಿನ್ನಂತೆ ಸಂಬೋಧಿಯನ್ನು ಪಡೆದಾರು" ಎಂದು ಹೇಳಿದನಂತೆ. ಇದು ಬುದ್ಧನ ನಿರ್ಧಾರವನ್ನು ಬದಲಿಸಿತೆಂದು ಕಥೆಯ

ವಿವರ. ಮಾರನಂತೆಯೇ ಬ್ರಹ್ಮ-ಸಹಂಪತಿಯೂ ಸಿದ್ಧಾರ್ಥನ ಚೇತನದೊಳಗಿದ್ದ ಪ್ರವೃತ್ತಿಯೇ. ಅವನು ಮನೆಬಿಟ್ಟು ಹೊರಟಾಗಲೇ ಲೋಕಕ್ಕೆ ಹಿತವಾಗ ಬೇಕೆಂಬ ಉದ್ದೇಶವಿದ್ದಿತು. "ಬಹುಜನಹಿತಾಯ ಬಹುಜನಸುಖಾಯ ದುಃಖ ದೋಮನಸ್ಸಾನಂ ಅತ್ಥಂಗಮಯ" ಎಂಬುದು ಅವನ ಮಾತೇ. ಇದೇ ಮುಂದೆ ಬೋಧಿಸತ್ತ್ವಪ್ರಣಿಧಿಯೆಂದು ಪ್ರಸಿದ್ಧವಾಯಿತು. ಲೋಕಕಲ್ಯಾಣೇಚ್ಛೆ ಸಂಬೋಧಿಯ ಅವಶ್ಯ ಅಂಗವೆಂದು ಸಿದ್ಧವಾಯಿತು.

(೭)

ಸಂಬೋಧಿಯಲ್ಲಿ ಎರಡು ಮುಖ್ಯ ವಿವರಗಳು—ಧ್ಯಾನ ಮತ್ತು ಪ್ರಜ್ಞೆ. ಇವೆರಡರಿಂದಲೇ ಸಿದ್ಧಾರ್ಥ ಬುದ್ಧನಾದುದು. ಎರಡನ್ನೂ ಕೂಡಿಸಿಕೊಂಡ ಸಮಾಧಿಯೇ ಬುದ್ಧನ ಪ್ರತೀಕ. ಬೌದ್ಧ ಧರ್ಮದಲ್ಲಿ ಬುದ್ಧನೇ ಪಂಥ ಪ್ರವರ್ತಕನೆಂಬ ಭಾವನೆಯಿದ್ದರೂ ಸಾಧಕರಿಗೆ ಅವನ ನೆರವು ಸೀಮಿತವಾದುದು. 'ತುಮ್ಹೇ ಹಿ ಕಿಚ್ಚಂ ಆತಪ್ಪಂ, ಅಕ್ಖಾತಾರೋ ತಥಾಗತಾ' ಎಂಬ ಹಳೆಯ ಮಾತು ಪ್ರಸಿದ್ಧವಾದುದು. "ಕೆಲಸವನ್ನು ನೀವೇ ಮಾಡಬೇಕು; ಬುದ್ಧರಾದವರು ದಾರಿ ತೋರಿಸುತ್ತಾರೆ ಅಷ್ಟೇ". ಇದು ಬುದ್ಧನೇ ಹೇಳಿದ ಮಾತು. ಬುದ್ಧನ ಸಂಬೋಧಿ ಬುದ್ಧನದಾಯಿತು; ನಮ್ಮ ಸಂಬೋಧಿಯನ್ನು ನಾವು ಒಬ್ಬೊಬ್ಬರೂ ಪಡೆದುಕೊಳ್ಳಬೇಕು. ಸಂಬೋಧಿಯ ದಾರಿ ಇಕ್ಕಟ್ಟಾದುದಂತೆ; ಅದನ್ನು 'ಏಕಾಯನ' ಎಂದು ಕರೆಯುತ್ತಾರೆ. ಒಬ್ಬನು ಮಾತ್ರ ನಡೆದು ಹೋಗಬಹುದಾದ ದಾರಿ ಅದು. ತನ್ನ ಜೊತೆ ಬುದ್ಧನೂ ಬರಲಾರ, ತಾನೊಬ್ಬನೇ ಸಾಗಬೇಕು.

ಸಿದ್ಧಾರ್ಥನ ಸಂಬೋಧಿ ಉಳಿದವರಿಗೆ ಒಂದು ಚೌಕಟ್ಟನ್ನು ಒದಗಿಸುತ್ತದೆ. ಈ ಸಂಬೋಧಿಯನ್ನು ಪಡೆಯಲು ಅವನು ಅನುಸರಿಸಿದ ದಾರಿ ಧ್ಯಾನದ್ದು. ವಿಷಯ ಸುಖಗಳನ್ನೇ ಹಿಡಿದು ಬಾಳುವುದು ಒಂದು ಕೊನೆ; ದೇಹ-ದಂಡನೆ ಮಾಡಿ ತಪಶ್ಚರ್ಯೆಮಾಡುವುದು ಇನ್ನೊಂದು ಕೊನೆ. ಎರಡೂ ಸಲ್ಲದ ಸಾಧನೆಗಳು. ಸಿದ್ಧಾರ್ಥನು ಎರಡನ್ನೂ ಬಿಟ್ಟು ನಡುವಣ ದಾರಿಯನ್ನು ಹಿಡಿದಿದ್ದು ಫಲಕಾರಿಯಾಯಿತು. ಇದೇ ಧ್ಯಾನದ ದಾರಿ. ಸಿದ್ಧಾರ್ಥನು ಸಂಬೋಧಿಗೆ ಮೊದಲು 'ಆನಾಪಾನಸ್ಮೃತಿ'ಯೆಂಬ ಮಾರ್ಗವನ್ನು ಹಿಡಿದಿದ್ದನೆಂದು ಪಾಳಿಗ್ರಂಥಗಳಲ್ಲಿ ಒಕ್ಕಣೆಯಿದೆ. ಇದನ್ನು 'ಸ್ಮೃತಿ ಪ್ರಸ್ಥಾನಸೂತ್ರ'

ವಿವರಿಸುತ್ತದೆ. ಬೌದ್ಧರ ಧ್ಯಾನಮಾರ್ಗ, ಮಹಾಯಾನವಾಗಲೀ, ಥೇರವಾದವಾಗಲೀ, ವಜ್ರಯಾನವಾಗಲೀ, ಶ್ರಾವಕಯಾನವಾಗಲೀ, ಇದನ್ನೇ ಅವಲಂಬಿಸಿರುತ್ತದೆ. ಧ್ಯಾನಮಾರ್ಗವೇ ಬೌದ್ಧಧರ್ಮದ ಸಾರಸರ್ವಸ್ವವೆಂದು ಎಲ್ಲರೂ ಒಪ್ಪುತ್ತಾರೆ.

ಕಾರಣಾಂತರಗಳಿಂದ ಕಾಲಕ್ರಮದಲ್ಲಿ ಧ್ಯಾನಮಾರ್ಗವು ನಮ್ಮ ದೇಶದಲ್ಲಿ ಹಿಂದೆ ಬಿದ್ದಿತು. ಕ್ರಿಸ್ತಾಬ್ದ ಐದಾರನೆಯ ಶತಮಾನಗಳಲ್ಲಿ ಇದು ಚೀಣಾದೇಶವನ್ನೂ ಹಿಮಾಲಯದ ನೆರೆನಾಡುಗಳನ್ನೂ ಮುಟ್ಟಿ ಅಲ್ಲಿ ಬೆಳೆಯಿತು. ಸಂಬೋಧಿಯ ಸಂದೇಶವನ್ನೂ ಧ್ಯಾನಮಾರ್ಗದ ಹೆಚ್ಚುಳವನ್ನೂ ಚೀಣಾದೇಶಕ್ಕೆ ಕೊಂಡೊಯ್ದವನು ಬೋಧಿಧರ್ಮನೆಂಬ ಭಾರತೀಯ ಭಿಕ್ಷು. ಇವನು ಕಾಂಚೀಪುರದವನು, ಬ್ರಾಹ್ಮಣ; ಬೌದ್ಧಧರ್ಮಕ್ಕೆ ಒಲಿದು ಧ್ಯಾನಮಾರ್ಗವನ್ನು ಮೈದುಂಬಿಸಿಕೊಂಡ. ಇವನು ಚೀಣಾದೇಶವನ್ನು ಕ್ರಿಸ್ತಾಬ್ದ ೫೨೦ರ ಸುಮಾರಿಗೆ ಸೇರಿ ಅಲ್ಲಿ ಬೌದ್ಧ ಧ್ಯಾನಪದ್ಧತಿಯನ್ನು ಬೇರೂರಿಸಿದ. ಇದು 'ಚ-ಹನ್' ಎಂದು ಅಲ್ಲಿ ಹೆಸರಾಯಿತು. ಸಂಸ್ಕೃತ ಮಾತಾದ 'ಧ್ಯಾನ' ಪ್ರಾಕೃತದಲ್ಲಿ 'ಝಾನ' ಎಂದಾಗುತ್ತದೆ. ಚೀಣೀ ಭಾಷೆಯಲ್ಲಿ ಇದು 'ಚ-ಹನ್' ಆಯಿತು. ಮುಂದೆ ಕೊರಿಯಾ ದೇಶದ ಮೂಲಕ ಈ ಸಂಪ್ರದಾಯ ಜಪಾನನ್ನು ಮುಟ್ಟಿದಾಗ 'ಝೆನ್' ಆಯಿತು. ಈ ಹೆಸರಿನಿಂದ ಇಂದು ಇದು ಪ್ರಪಂಚದಲ್ಲೆಲ್ಲ ಪ್ರಸಿದ್ಧವಾಗಿದೆ. ಆ ದೇಶದಲ್ಲಿ ಕೊಂಚ ಬದಲಾವಣೆಗಳಾದರೂ ಅದರ ಮೂಲಸ್ವರೂಪ ಭಾರತೀಯವೇ ಆಗಿದೆ.

ಧ್ಯಾನಮಾರ್ಗವನ್ನೇ ಹಿಡಿದವರ ಪರಂಪರೆ ಬುದ್ಧನ ಕಾಲದಿಂದಲೇ ಶುರುವಾಗಿರಬೇಕು. ಆದರೆ ಸಂಘ ಬೆಳೆದು ಬರುತ್ತ ಯತಿಧರ್ಮವನ್ನು ಕುರಿತ ಆಚಾರಸಂಹಿತೆ (ವಿನಯ) ಮತ್ತು ಶಾಸ್ತ್ರಪ್ರಕ್ರಿಯೆ ಬೆಳೆದು ಬರುತ್ತ ಗಹನವಾದ ವಿಚಾರಗಳ ಪರಿಶೀಲನೆ (ಅಭಿಧರ್ಮ) ಇವೆರಡೂ ಪ್ರಮುಖವಾಗಿ ಕಾಣಿಸಿಕೊಂಡುವು. ಸಂಬೋಧಿಗಾಗಿ ಸಿದ್ಧತೆ ಅಥವಾ ಸಂಬೋಧಿಯ ವಿಚಾರವಿಮರ್ಶೆ ಇವೇ ಶಿಷ್ಯರ ಗಮನವನ್ನು ಹೆಚ್ಚಾಗಿ ಸೆಳೆದುವು. ಸಂಬೋಧಿಯನ್ನು ಪಡೆಯುವುದರ ಬಗ್ಗೆ ಉತ್ಸುಕತೆ ಕಡಮೆಯಾಯಿತು. ವಾದವಿವಾದಗಳೂ, ಪಂಥಪ್ರಕ್ರಿಯೆಗಳೂ, ಆಚಾರಭೇದಗಳೂ ಕಾಣಿಸಿಕೊಂಡು ಬುದ್ಧನ ಮೂಲೋದ್ದೇಶವೇ ಮರೆಯಾಯಿತು.

ಆದರೆ ಬುದ್ಧನ ಶಿಷ್ಯರಲ್ಲಿ ಮಹಾಕಾಶ್ಯಪನೆಂಬುವನು ಧ್ಯಾನಮಾರ್ಗ

ವನ್ನೇ ನಂಬಿದವನು; ಸಂಬೋಧಿಯನ್ನೇ ನೇರವಾಗಿ ಅರಸಿದವನು. ಬುದ್ಧನ ಬೋಧೆಯಲ್ಲಿ ಸಾರವಾದುದನ್ನು ಗ್ರಹಿಸಿದವನು. ಒಮ್ಮೆ ಬುದ್ಧ ಕೈಯಲ್ಲಿ ಹೂವೊಂದನ್ನು ಹಿಡಿದು, ಮಾತನಾಡದೆ ಕುಳಿತು, ಸುತ್ತಲೂ ನೆರೆದಿದ್ದ ಶಿಷ್ಯರತ್ತ ನೋಡಿದನಂತೆ. ಇದರ ಇಂಗಿತವೇನೆಂದು ಯಾರಿಗೂ ತಿಳಿಯಲಿಲ್ಲ. ಮಹಾಕಾಶ್ಯಪನೊಬ್ಬ ಬುದ್ಧನನ್ನು ನೋಡಿ ನಸುನಕ್ಕನಂತೆ; ಬುದ್ಧನ ಇಂಗಿತವನ್ನು ಅರ್ಥಮಾಡಿಕೊಂಡವನು ಅವನೊಬ್ಬನೇ. ಸಂಬೋಧಿಯನ್ನು ಕುರಿತು ಮಾತಿನಲ್ಲಿ ಬೋಧಿಸುವುದು ಸಾಧ್ಯವೇ? ಮಾತಿಗೂ, ಮನಸ್ಸಿಗೂ ಮೀರಿದ ನೆಲೆಯಲ್ಲವೆ ಅದು? ಮನಸ್ಸನ್ನು ದಾಟಿದಮೇಲೆ ಒದಗುವ ಅರಿವಿನ ಅನುಭವ ಅದು; ಮೂಕ ಕಂಡ ಕನಸಿನಂತೆ ಅದನ್ನು ಇತರರೆದುರು ವಿವರಿಸುವುದು ಸಲ್ಲದು. ಮಹಾಕಾಶ್ಯಪನೊಬ್ಬ ಇದನ್ನು ನೇರವಾಗಿ ಅರಿತುಕೊಂಡ. ಮುಂದೆ ಆನಂದನಿಗೆ ಇದನ್ನು ಮುಟ್ಟಿಸಿದ. ಆನಂದ ಬುದ್ಧನ ಶಿಷ್ಯರಲ್ಲಿ ಕಿರಿಯವನು, ಬುದ್ಧನ ಪರಿಚಾರಕನಾಗಿದ್ದವನು, ಗುರುವಿಗೆ ಅಚ್ಚುಮೆಚ್ಚಿನ ಭಕ್ತ. ಅವನಿಗೆ ಶಾಸ್ತ್ರಪ್ರಕ್ರಿಯೆಗಳ ಮೇಲೆ ಎಂದೂ ವಿಶ್ವಾಸವಿರಲಿಲ್ಲ. ಅವನ ಬುದ್ಧಿಶಕ್ತಿ ಅಷ್ಟು ಪ್ರಖರವಾದುದಲ್ಲ ಎಂದು ಉಳಿದ ಶಿಷ್ಯರೆಲ್ಲ ಭಾವಿಸಿದ್ದರು. ಗುರುವು ಆನಂದನನ್ನು ಏಕೆ ಇಷ್ಟು ಮೆಚ್ಚಿಕೊಂಡಿದ್ದಾನೆ ಎಂಬುದು ಅವರಿಗೆ ಬಿಡಿಸಲಾರದ ಒಗಟಾಗಿದ್ದಿತು. ಆನಂದ ಧ್ಯಾನಮಾರ್ಗಕ್ಕೆ ಒಲಿದವನು.

ಧ್ಯಾನಮಾರ್ಗದ ಪರಂಪರೆ ಆನಂದನಿಂದ ಶಾಣಕವಾಸ, ಉಪಗುಪ್ತ, ಧೃತಕ ಮೊದಲಾದವರಿಂದ ಮುಂದರಿದು ಬೋಧಿಧರ್ಮನವರೆಗೆ ಬಂದಿತು. ಈ ಪರಂಪರೆಯಲ್ಲಿ ಬೋಧಿಧರ್ಮ ಇಪ್ಪತ್ತೆಂಟನೆಯವನು. ಅವನಿಗೆ ಈ ಧ್ಯಾನಮಾರ್ಗವನ್ನು ಮುಟ್ಟಿಸಿದವನು ಪ್ರಜ್ಞಾತಾರನೆಂಬ ಗುರು. ಬೋಧಿಧರ್ಮನ ಕಾಲಕ್ಕೆ ಧ್ಯಾನಮಾರ್ಗದ ಪರಂಪರೆ ನಮ್ಮ ದೇಶದಿಂದ ಚೀಣಾದೇಶವನ್ನು ಸೇರಿತು. ಅಲ್ಲಿ ಅವನು ಪರಂಪರೆಯ ಮೊದಲ ಗುರುವಾದ. ಅವನ ನಂತರ ಹುಯಿ-ಖೋ, ಸೆಂಗ್-ತ್ಸನ್, ತಾವೋ ಹ್ಸಿನ್ ಮತ್ತು ಹುಂಗ್‘-ಜೆನ್ ಎಂಬ ಐವರು ಗುರುಗಳು ಬಂದರು. ಈ ಐದನೆಯ ಗುರುವಿನ ಕಾಲಕ್ಕೆ ಅಲ್ಲಿಯೂ ಪಂಥಪ್ರಕ್ರಿಯೆ ಮೊದಲಾಯಿತು.

ಆದರೆ ಅವನ ಶಿಷ್ಯ ಹುಯ್-ನೆಂಗ್ (ಕ್ರಿಸ್ತಾಬ್ದ 638 ರಿಂದ 713) ಧ್ಯಾನಮಾರ್ಗದ ಜನಪ್ರೀತಿಗೆ ಕಾರಣನಾದ. ಅವನನ್ನು ಆರನೆಯ ಮತ್ತು ಕಡೆಯ ಗುರು ಎಂದು ಕರೆಯುತ್ತಾರೆ. ಇವನು ಸಂಬೋಧಿಯ ರುಚಿಯನ್ನು

ತಾನೇ ಅನುಭವಿಸಿದವನು. ಮೊದಲಬಾರಿ ಗುರುವಿನಿಂದ ಧ್ಯಾನಮಾರ್ಗದ ಉಪದೇಶವನ್ನು ಪಡೆದು ಸಂಬೋಧಿಯ ಸಾಧ್ಯತೆಯನ್ನು ಅರಿತುಕೊಂಡಾಗ ಅವನ ಬಾಯಿಂದ ಒಂದು ಉದಾನ ಹೊರಬಂದುದನ್ನು ಅವನ ಶಿಷ್ಯರು ಉಳಿಸಿಕೊಂಡಿದ್ದಾರೆ—

"ಚಿತ್ತ ಭೂಮಿಯಲ್ಲಿ ಹೂಬೀಜ ಅಡಗಿದೆ,
ಮಳೆ ಬಿದ್ದಿತೆಂದರೆ ಅದು ಮೊಳಕೆಯಾಗುತ್ತದೆ.
ಇದ್ದಕ್ಕಿದ್ದಂತೆ ಅರಳುವ ಅರಿವಿನ ಹೂ
ಸಂಬೋಧಿಯ ಹಣ್ಣನ್ನು ಬಿಡದೆ ಇರುವುದೆ?"

ಇಲ್ಲಿ ಚಿತ್ತಭೂಮಿಯೆಂದರೆ ಮಾನವ ಸ್ವಭಾವ; ಹೂಬೀಜವೆಂದರೆ ಬುದ್ಧ ಪ್ರಕೃತಿ. ಪ್ರತಿಯೊಬ್ಬ ಮನುಷ್ಯನಲ್ಲೂ ಬುದ್ಧತ್ವದ ಬೀಜ ಅಡಗಿರುತ್ತದೆ. ಆದರೆ ಅದು ಬೆಳೆಯಲು ಮಳೆಯ ನೆರವು ಬೇಕು. ಮಳೆ ಬೀಜದ ಮೇಲೆ ಮಾತ್ರ ಬೀಳುವುದಿಲ್ಲ; ಲೋಕದಲ್ಲೆಲ್ಲ ಬೀಳುತ್ತದೆ. ಬುದ್ಧ ಧರ್ಮವೆಂಬುದೇ ಈ ಮಳೆ; ಅದು ನಿರಂತರವಾಗಿ, ಸರ್ವವ್ಯಾಪಕವಾಗಿ ಇರುವುದು. ಇದರ ಸಂಪರ್ಕವಾದರೆ ನಮ್ಮ ಸ್ವಭಾವದೊಳಗೆ ಅಡಗಿರುವ ಬುದ್ಧತ್ವದ ಬೀಜ ಮೊಳಕೆಯಾಗಿ ಚಿಗುರೊಡೆಯುತ್ತದೆ. ಹೀಗೆ ಚಿಗುರೊಡೆಯುವಾಗ ಅದು ಕ್ರಮ ಕ್ರಮವಾಗಿ ಜರುಗುವ ಕ್ರಿಯೆಯಲ್ಲ. ಮೊಳಕೆಯಾಗುವುದನ್ನಾಗಲೀ ಚಿಗುರೊಡೆಯುವುದನ್ನಾಗಲೀ ಮೊಗ್ಗು ಅರಳುವುದನ್ನಾಗಲೀ ಯಾರು ದಿಟ್ಟಿಸಿ ನೋಡಿ ಅದರ ಘಟ್ಟಗಳನ್ನು ಗುರುತಿಸಿಯಾರು? ಅರಿವು ಅರಳುವಾಗಲೂ ಹೀಗೆಯೇ. ಅರಿವೆಂದರೆ ಪ್ರಜ್ಞೆ; ವಸ್ತುಗಳನ್ನು ಇದ್ದುದು ಇದ್ದಂತೆ ನೋಡಬಲ್ಲ ಕಣ್ಣು, ಹಾಗೆ ಕಾಣಿಸಬಲ್ಲ ಬೆಳಕು. ಮಹಾಕಾಶ್ಯಪನು ಬುದ್ಧನ ಕೈಯಲ್ಲಿ ಕಂಡ ಹೂವು ಇದೇ. ಅರಿವು ಅರಳಿತೆಂದರೆ ಸಂಬೋಧಿಯ ಫಲ ಸಿದ್ಧವಾದುದೇ.

ಹೀಗೆ ಇವನವರೆಗೆ ಸಾಗಿಬಂದ ಧ್ಯಾನಮಾರ್ಗದ ಮುಖ್ಯವಿಚಾರ, ಬುದ್ಧನು ವೈಶಾಖಪೂರ್ಣಿಮೆಯಂದು ಪಡೆದುಕೊಂಡ ಸಂಬೋಧಿಯ ಅನುಭವ. ಬುದ್ಧನ ಸಂಬೋಧಿ ಒಂದು ಪ್ರತೀಕ. ಎರಡು ಸಾವಿರದ ಆರುನೂರು ವರ್ಷಗಳಷ್ಟು ಹಿಂದೆ ವ್ಯಕ್ತಿಯೊಬ್ಬನು ಗಳಿಸಿಕೊಂಡ ಸಂಬೋಧಿಯ ಹಿರಿಮೆಯಿರುವುದು ಪ್ರತೀಕದಲ್ಲಿ. ಅದು ನಮ್ಮಲ್ಲಿ ಒಬ್ಬೊಬ್ಬನ ಬದುಕಿನಲ್ಲಿಯೂ

ಮೂಡಿಬರದಿದ್ದರೆ ಆ ಪ್ರತೀಕಕ್ಕೆ ಅರ್ಥವಿಲ್ಲ; ಆ ವ್ಯಕ್ತಿಗೆ ಸಾರ್ಥಕತೆಯಿಲ್ಲ. ಧ್ಯಾನಮಾರ್ಗವು ನಮ್ಮಲ್ಲಿ ಅಡಗಿರುವ ಸಂಬೋಧಿಯ ಬೀಜದ ಕಡೆ ಬೆರಳಿಟ್ಟು ತೋರಿಸುತ್ತದೆ. ಬುದ್ಧನು ತನ್ನ ಹೃದಯದ ಬಳಿ ಹೂವೊಂದನ್ನು ಹಿಡಿದು ಕುಳಿತಾಗ ಮಹಾಕಾಶ್ಯಪ ಇದರ ಭಾವವನ್ನು ತಟ್ಟನೆ ಅರಿತುಕೊಂಡ. ಮಾತಿನಿಂದ ಮೂಡಿಬಂದ ಪರಂಪರೆ ಅದಲ್ಲ; ಮೌನದಿಂದ ನೇರವಾಗಿ ಹರಿದುಬಂದ ಪ್ರವಚನದ ಪರಂಪರೆ. ಶಾಸ್ತ್ರಸಂಪ್ರದಾಯದ ಹೊರಗಿರುವ ಸಂಪ್ರದಾಯ ಇದು. ಏಕೆಂದರೆ ಎಲ್ಲ ಆಲೋಚನೆಗಳೂ, ಲೌಕಿಕವಾಗಲೀ, ಶಾಸ್ತ್ರೀಯವಾಗಲೀ, ಧ್ಯಾನಕ್ಕೆ ಅಡ್ಡಿತರತಕ್ಕವೇ. ಯೋಗಿಗೆ ಇಂಥ ಆಲೋಚನೆಗಳು ವಿಷಸರ್ಪಗಳಿಗಿಂತಲೂ ಕ್ರೂರಮೃಗಗಳಿಗಿಂತಲೂ ಭಯಾನಕವಾದುವು.

ಕಡೆಗೆ ಬುದ್ಧನಲ್ಲಿ ವಿಶೇಷವಾದ ಭಕ್ತಿಯಿರುವುದೇ ಧ್ಯಾನಕ್ಕೆ ಪ್ರತ್ಯವಾಯವಾಗಬಹುದು. ಜಪಾನೀ ಧ್ಯಾನಮಾರ್ಗದವರಲ್ಲಿ ಕಥೆಯೊಂದು ಬಳಕೆಯಲ್ಲಿದೆ. ಒಬ್ಬ ಬೌದ್ಧಭಿಕ್ಷು, ಧ್ಯಾನಮಾರ್ಗವನ್ನು ಹಿಡಿದವನು, ತನ್ನ ಮಠದ ಮುಂದೆ ನಿಂತಿದ್ದ. ಮಳೆ ಬರುತ್ತಿದ್ದು ಚಳಿಯಾಗುತ್ತಿತ್ತು. ಮಳೆಗೆ ಅಂಜಿ ಹಲವರು ಮಠದಲ್ಲಿಯೇ ನಿಂತಿದ್ದರು. ಚಳಿ ಹೆಚ್ಚುತ್ತಿತ್ತು. ಪಕ್ಕದಲ್ಲೇ ಶಾಸ್ತ್ರಗ್ರಂಥಗಳನ್ನು ಪೇರಿಸಿಟ್ಟಿದ್ದರು. ಈ ಭಿಕ್ಷು ಆ ಗ್ರಂಥಗಳಲ್ಲಿ ಕೆಲವನ್ನು ತೆಗೆದು ಬೆಂಕಿಕಡ್ಡಿ ಗೀರಿ ಹೊತ್ತಿಸಿದ. ಅದರ ಕಾವು ಚಳಿಯನ್ನು ಕೊಂಚ ಮಟ್ಟಿಗೆ ನೀಗಿಸಿತು. ಆದರೆ ಅಲ್ಲಿ ನಿಂತಿದ್ದವರಿಗೆ ಸೋಜಿಗವಾಯಿತು, ಇದೇನಿದು ಈ ಭಿಕ್ಷು ಪವಿತ್ರ ಗ್ರಂಥಗಳನ್ನೇ ಹೀಗೆ ಸುಡುತ್ತಿದ್ದಾನೆ ಎಂದು. ಅವರು ತಮ್ಮ ಕುತೂಹಲವನ್ನು ತಡೆಯಲಾರದೆ, "ಭಿಕ್ಷುವಾದ ನೀನು ಹೀಗೆ ಪವಿತ್ರ ಗ್ರಂಥಗಳನ್ನು ಸುಡಬಹುದೆ?" ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ಭಿಕ್ಷು ಅಲ್ಲೇ ಇದ್ದ ಬುದ್ಧನ ಮರದ ಪ್ರತಿಮೆಯೊಂದನ್ನೇ ತೆಗೆದು ಬೆಂಕಿಗೆ ಒಡ್ಡಿದ. ಅದರ ಕಾವಿನಲ್ಲಿ ಮೈ ಕಾಯಿಸಿಕೊಳ್ಳುತ್ತ, "ಚಳಿ ಹೋಯಿತಲ್ಲವೆ?" ಎಂದು ನೆರೆದವರನ್ನು ಕೇಳಿದ.

ಈ ಕಥೆ ಮಾರ್ಮಿಕವಾದುದು. ಶಾಸ್ತ್ರವೆಲ್ಲ ಬರಿಯ ಪುಸ್ತಕದಲ್ಲಿ, ಬುದ್ಧನ ಪ್ರತೀಕವೆಲ್ಲ ಮರದ ಗೊಂಬೆಯಲ್ಲಿ ಉಳಿದುಬಿಟ್ಟರೆ ಏನು ಪ್ರಯೋಜನವಾಯಿತು? ಒಳಗಿರುವ ಕತ್ತಲೆಯನ್ನು ಕಳೆಯದ ಶಾಸ್ತ್ರಪ್ರವಚನ ಏತಕ್ಕೆ? ಒಳಗಿನ ಚಳಿಯನ್ನು ಕಳೆಯದ ಬುದ್ಧನ ಕಾವು ಗೊಂಬೆಯಲ್ಲಿದ್ದೀತೆ? ಸಂಬೋಧಿಯನ್ನು ತಿಳಿಸುವ ಶಾಸ್ತ್ರ ನಮಗೆ ಕಾವು ಕೊಟ್ಟರೆ ಅದರ ಪ್ರಯೋಜನ; ಬುದ್ಧನ

ಪ್ರತೀಕ ನಮ್ಮ ಬದುಕಿನಲ್ಲಿ ನೆಮ್ಮದಿಯನ್ನು ತರಬೇಕು. ಮೇಲಾಗಿ, ಶಾಸ್ತ್ರವಾಗಲೀ ಬುದ್ಧನಾಗಲೀ ನಮ್ಮ ಹೊರಗೆ ಇರುವ ವಿವರಗಳಲ್ಲ; ನಮ್ಮ ಅಂತರಾಳದಲ್ಲೇ ಅಡಗಿರುವುವು ಅವು. ಯತಿಧರ್ಮ, ಶಾಸ್ತ್ರಾಧ್ಯಯನ, ಶೀಲಶುದ್ಧಿ ಮೊದಲಾದುವೆಲ್ಲ ಸಿದ್ಧತೆಗಳಷ್ಟೆ. ಅಷ್ಟರಿಂದಲೇ ಸಂಬೋಧಿ ದೊರಕುವುದೆಂದರೆ ಹುಚ್ಚುಮಾತು. ಧ್ಯಾನಮಾರ್ಗದವರ ಇನ್ನೊಂದು ಕಥೆಯಿದೆ. ಒಬ್ಬ ಯೋಗಿ ನದಿಯೊಂದರ ದಡದಲ್ಲಿ ತಪಶ್ಚರ್ಯೆ ನಡೆಸುತ್ತಿದ್ದ. ಧ್ಯಾನಮಾರ್ಗದ ಭಿಕ್ಷುವೊಬ್ಬ ಅಲ್ಲಿಗೆ ಬಂದವನು, ಯೋಗಿಯನ್ನು ಕುರಿತು "ಏನು ಮಾಡುತ್ತಿದ್ದೀಯೆ?" ಎಂದು ಕೇಳಿದ. ಅದಕ್ಕೆ ಯೋಗಿ, "ನಾನು ಬದ್ಧನಾಗಬಯಸಿ ಯೋಗಾಭ್ಯಾಸ ಮಾಡುತ್ತಿದ್ದೇನೆ" ಎಂದ. ಮರುಮಾತಾಡದೆ ಭಿಕ್ಷು ನದಿಯ ದಡದಲ್ಲಿ ಕಲ್ಲೊಂದನ್ನು ಎತ್ತಿಕೊಂಡು ಅದನ್ನು ನೀರಿನಲ್ಲಿ ಚೆನ್ನಾಗಿ ತೊಳೆಯತೊಡಗಿದ. ಎಷ್ಟು ಹೊತ್ತಾದರೂ ಇದು ಮುಗಿಯಲೇ ಇಲ್ಲ. ಕುತೂಹಲದಿಂದ ಯೋಗಿ ಅವನನ್ನು ಕುರಿತು "ಏನು ಮಾಡುತ್ತಿದ್ದೀಯೆ?" ಎಂದು ಕೇಳಿದ. ಅದಕ್ಕೆ ಭಿಕ್ಷು—"ಈ ಕಲ್ಲನ್ನು ಕನ್ನಡಿಯನ್ನಾಗಿ ಮಾಡಲು ತಿಕ್ಕಿ ತೊಳೆಯುತ್ತಿದ್ದೇನೆ" ಎಂದುತ್ತರವಿತ್ತ. ಯೋಗಿ ನಕ್ಕು "ಎಂಥ ಬೆಪ್ಪ ನೀನು! ಕಲ್ಲನ್ನು ತಿಕ್ಕಿ ತೊಳೆದರೆ ಅದು ಕನ್ನಡಿಯಾಗುವುದೆ?" ಎಂದು ಕೇಳಲು ಭಿಕ್ಷು "ಏಕಾಗಬಾರದು? ತಪಶ್ಚರ್ಯೆಯಿಂದ ನೀನು ಬುದ್ಧನಾಗಬಹುದಾದರೆ, ಈ ಕಲ್ಲೂ ತಿಕ್ಕಿ ತೊಳೆದರೆ ಕನ್ನಡಿಯಾಗಬಹುದು" ಎಂದು ಹೇಳಿದ.

(೮)

ಧ್ಯಾನಮಾರ್ಗದ ದೃಷ್ಟಿಯಲ್ಲಿ ಮನಸ್ಸು ಮುಖ್ಯವಾದ ಸಾಮಗ್ರಿ. ಅದಕ್ಕೆ ಹೊರಪದರ, ಒಳಪದರಗಳುಂಟು. ಹೊರಪದರ ಹೊರಗಿನ ಪ್ರಪಂಚಕ್ಕೆ ಸಂಬಂಧಪಟ್ಟಂತೆ ವ್ಯವಹಾರಕ್ಕೆ ಅನುವಾದ ಮಾನಸಿಕ ಪ್ರವೃತ್ತಿಗಳು. ಒಳಪದರ 'ತಾನು' 'ತನ್ನದು' ಎಂದು ಅಂಟಿಕೊಳ್ಳುವ ಮೂಲಪ್ರವೃತ್ತಿ. ಒಂದೇ ಪದರದ ಎರಡು ಮುಖಗಳು ಇವು, ಒಂದು ಹೊರಮುಖ, ಇನ್ನೊಂದು ಒಳಮುಖ. ನಮ್ಮ ನಿತ್ಯವ್ಯವಹಾರವೆಲ್ಲ ಇದರ ಮೂಲಕವೇ ನಡೆಯುವುದು; ಧರ್ಮವೂ ಇದನ್ನು ಮೀರಿ ನಿಲ್ಲುವುದಿಲ್ಲ; ಶಾಸ್ತ್ರವೆಲ್ಲ ಇದರಲ್ಲೇ ನಡೆಯುವುದು. ಆದರೆ ಈ ಪದರಗಳನ್ನು ಹರಿದು ಒಳಗೆ ಹೋದರೆ ಇರುವುದು ಅರಿವು; ಇದರ ಇರವು ಸಂಸಾರದಾಚೆ ಎನ್ನಬಹುದು, ಆದರೆ ಇದಿಲ್ಲದೆ ಸಂಸಾರವೂ ಇರದು.

ಇದನ್ನು ಮನಸ್ಸಿನ ಸಾರ, ಶುದ್ಧವಾದ ನೆಲೆ ಎನ್ನುತ್ತಾರೆ. ಇದರ ಒಂದು ಮುಖ ಬೆಳಕು, ಎಂದರೆ ಜ್ಞಾನ. ಶಾಸ್ತ್ರದಿಂದ ಬರುವ ತಿಳುವಳಿಕೆ ಜ್ಞಾನವಲ್ಲ. ತನ್ನ ಅನುಭವದ ಒಡಲಿಂದಲೇ ಮೂಡಿಬರುವ ಈ ಜ್ಞಾನದ ಬೆಳಕು ಬದುಕನ್ನೇ ಬೆಳಗುತ್ತದೆ. ಅದರ ಇನ್ನೊಂದು ಮುಖ ಶೂನ್ಯ, ಎಂದರೆ ಅದನ್ನು ಏನೆಂದೂ ಹೇಳಬರುವುದಿಲ್ಲ. ಅಲ್ಲಿಯೇ ನೆಮ್ಮದಿ ಕದಲದೆ ಇರುವುದು. ಸಂಸಾರಧರ್ಮವನ್ನು ಮೀರಿದುದರಿಂದ ಅದನ್ನು ಶೂನ್ಯವೆಂದು ವ್ಯವಹರಿಸುತ್ತಾರೆ.

ಸಂಬೋಧಿಯೆನ್ನುವುದು ಈ ಮನಸ್ಸಿನ ಆಳ-ಎತ್ತರಗಳನ್ನು ಅಳೆಯುವ ಒಂದು ಬಗೆ. ಧ್ಯಾನಮಾರ್ಗದಲ್ಲಿ ಎರಡು ವಿವರಗಳನ್ನು ಸ್ಪಷ್ಟಪಡಿಸುತ್ತಾರೆ: ಒಂದು ನೋಟ, ಇನ್ನೊಂದು ಕೆಲಸ. ನೋಟವೆಂದರೆ ಬೆಟ್ಟವನ್ನೇರಿ ಮೇಲೆ ನಿಂತು ಅಲ್ಲಿಂದ ಸುತ್ತಲ ಎಲ್ಲವನ್ನು ನೋಡುವುದು. ಮನಸ್ಸನ್ನು ಇಲ್ಲಿ ಬೆಟ್ಟದಂತೆ ಕಂಡಿದ್ದಾರೆ. ಕೆಲಸವೆಂದರೆ ಸಮುದ್ರದೊಳಗಿಳಿದು ಅದರ ತಳದಲ್ಲಿ ನಡೆಯತೊಡಗುವುದು. ಇಲ್ಲಿ ಮನಸ್ಸು ಸಮುದ್ರ. ಸಾಮಾನ್ಯವಾದ ಮನಸ್ಸು, ಎಂದರೆ ಲೋಕವ್ಯವಹಾರದಲ್ಲಿ ತೊಡಗಿರುವ ನಮ್ಮ ಮನಸ್ಸು ಬೆಟ್ಟವನ್ನೂ ಏರಿ ನಿಲ್ಲಲಾರದು, ಸಮುದ್ರದ ತಳವನ್ನೂ ಮುಟ್ಟಲಾರದು. ನಮಗೆ ನೋಟವೂ ಸಾಧ್ಯವಿಲ್ಲ, ಕೆಲಸವೂ ಸಾಧ್ಯವಿಲ್ಲ. ಏಕೆಂದರೆ ವ್ಯವಹಾರದ ನೆಲೆಯಲ್ಲಿರುವ ಮನಸ್ಸು ಅಂಟಿಕೊಳ್ಳುವ ಸ್ವಭಾವದ್ದು. ಅದು ಹರಿಯುವ ನೀರಲ್ಲ; ಒಂದೆಡೆ ನಿಂತ ಹೊಂಡ. ಅದರಲ್ಲಿ ಕೊಳೆ ಸೇರುತ್ತದೆ, ಪಾಚಿ ಕಟ್ಟುತ್ತದೆ, ಹುಳುಗಳು ಹುಟ್ಟುತ್ತವೆ.

ಸಿದ್ಧಾರ್ಥನು ಮನೆಬಿಟ್ಟು ಹೊರಟಾಗ ಕಂಡದ್ದು ಇಂಥ ಮನಸ್ಸನ್ನು; ಅದಕ್ಕೇ ಅವನಿಗೆ ಬೇಸರವಾಯಿತು, ಭಯವಾಯಿತು. ಈ ಮನಸ್ಸನ್ನು ಹೊರದೂಡಬೇಕೆಂದು ಅವನು ಯೋಗಾಭ್ಯಾಸ, ತಪಶ್ಚರ್ಯೆಗಳನ್ನು ನಡೆಸಿದ. ಆದರೆ ಮನಸ್ಸು ಹೊರಗೆ ಎಲ್ಲೂ ಹೋಗುವುದಲ್ಲ; ಅದನ್ನು ಬಿಟ್ಟು ನಾವೆಲ್ಲಿ ಹೋಗುವುದು, ನಮ್ಮನ್ನು ಬಿಟ್ಟು ಅದೆಲ್ಲಿ ಹೋದೀತು? ಈ ಮರ್ಮವನ್ನು ಅರಿಯದೆ ಸಿದ್ಧಾರ್ಥ ಏಳು ವರ್ಷಗಳು ಹೆಣಗಾಡಿದ. ಮನಸ್ಸಿನ ಅನಿವಾರ್ಯತೆಯನ್ನೂ ಮನಸ್ಸಿನ ಆಳ-ಎತ್ತರಗಳನ್ನು ಅವನು ಇದ್ದಕ್ಕಿದ್ದಂತೆ ಕಂಡುಕೊಂಡನಂತರ ಧ್ಯಾನದ ದಾರಿ ಹಿಡಿದ. ಗಯೆಯಲ್ಲಿ ನೇರಂಜರಾ ನದಿಯ ದಡದಮೇಲೆ ಅರಳೀಮರದ ಕೆಳಗೆ ಕುಳಿತು ತನ್ನ ಮನಸ್ಸನ್ನೇ ಏರಿ ಮೇಲೆ ಹೋದ; ಬೆಟ್ಟವೇರಿ ಸುತ್ತಲೂ ನೋಡಿದ; ಕೆಳಗಿನ ಹಳ್ಳಿಗಳೆಲ್ಲ ಕಂಡವು; ಮೊದಲು ತಾನು

ನೋಡದ ನೋಟಗಳನ್ನೆಲ್ಲ ಈಗ ನೋಡುವುದು ಸಾಧ್ಯವಾಯಿತು. "ಪುಬ್ಬೇಸು ಅನನುಸ್ಸುತೇಸು ಧಮ್ಮೇಸು ಚಕ್ಖುಂ ಉದಪಾದಿ" ಎಂದಲ್ಲವೇ ಅವನು ಧರ್ಮ ಚಕ್ರಪ್ರವರ್ತನಸೂತ್ರದಲ್ಲಿ ಹೇಳಿಕೊಂಡದ್ದು? ಆಗ ತಿಳಿದುಕೊಳ್ಳಬೇಕಾದು ದನೆಲ್ಲ ತಿಳಿದುಕೊಂಡ; ಸಾಕ್ಷಾತ್ಕರಿಸಿಕೊಳ್ಳಬೇಕಾದುದನ್ನೆಲ್ಲ ಸಾಕ್ಷಾತ್ಕರಿಸಿ ಕೊಂಡ. ಇದು ಪ್ರಜ್ಞೆಯಾಯಿತು, ಜ್ಞಾನವಾಯಿತು, ವಿದ್ಯೆಯಾಯಿತು, ಬೆಳ ಕಾಯಿತು.

ಮತ್ತೆ, ಅದೇ ಸ್ಥಳದಲ್ಲಿ ಕುಳಿತು ಸಿದ್ಧಾರ್ಥನು ಮನಸ್ಸಿನ ಆಳಕ್ಕೆ ಇಳಿದ. ಸಮುದ್ರದ ತಳವನ್ನು ಮುಟ್ಟಿ ಅಲ್ಲಿ ನಡೆದಾಡತೊಡಗಿದ. ಆಗ ಕಳೆದುಕೊಳ್ಳಬೇಕಾದುದನ್ನೆಲ್ಲ ಕಳೆದುಕೊಳ್ಳುವುದಾಯಿತು; ಮೂಡಿಸಿಕೊಳ್ಳ ಬೇಕಾದುದನ್ನೆಲ್ಲ ಮೂಡಿಸಿಕೊಳ್ಳುವುದಾಯಿತು. ಇದು ಕೆಲಸ. ಇದನ್ನೇ ಧ್ಯಾನವೆನ್ನುವುದು. ಧ್ಯಾನದಲ್ಲಿ ನಾವು ಮನಸ್ಸಿನ ಆಳಕ್ಕೆ ಇಳಿಯಬೇಕು; ಹೊರಪದರಗಳನ್ನೆಲ್ಲ ಹರಿದು ಒಳಪದರವನ್ನೂ ದಾಟಿದರೆ ಮನಸ್ಸಿನ ಮೂಲ ಸ್ವರೂಪದಲ್ಲಿ, ಅದರ ಸ್ವ-ಭಾವದಲ್ಲಿ ಅದು ನಿಲ್ಲುತ್ತದೆ. ಭಾವನೆಗಳು, ಆಲೋ ಚನೆಗಳು, ನೆನಪುಗಳು, ಬಯಕೆಗಳು, ಭೀತಿಗಳು, ಎಲ್ಲವೂ ಮನಸ್ಸಿನ ಅಲೆಗಳೇ, ಅಬ್ಬರಗಳೇ. ಅವೆಲ್ಲ ನಿಂತರೆ ನೀರಿನ ಆಳ ತಿಳಿಯಾಗಿ ಕಾಣುತ್ತದೆ. ಮನಸ್ಸು ದಿಟವಾಗಿ ಪರಿಶುದ್ಧವಾದುದು, ವಿಶಾಲವಾದುದು, ಪರಿಪೂರ್ಣವಾದುದು, ಪ್ರಕಾಶಮಾನವಾದುದು, ಯಾವ ವಸ್ತುವನ್ನೂ ಒಳಗೊಳ್ಳದ್ದು ಎಂಬ ಅರಿವೇ ಸಂಬೋಧಿ; ಇಂಥ ಮನಸ್ಸಿನಾಚೆ ಏನೂ ಇರದು ಎಂದು ಕಂಡುಕೊಳ್ಳುವುದೇ ಸಮಾಧಿ. ಮನಸ್ಸು ತನ್ನ ಆಳ-ಎತ್ತರಗಳಲ್ಲಿ ಅಂಟಿಕೊಳ್ಳುವ ಸ್ವಭಾವದ್ದಲ್ಲ; ಅಂಟಿಕೊಳ್ಳುವ ಗುಣ ಇರುವುದು ನಡುವಣ ವ್ಯವಹಾರದ ನೆಲೆಯಲ್ಲಿ ಮಾತ್ರ. ಅದನ್ನು ಸಾಂಸಾರಿಕ ಮನಸ್ಸು ಎಂದು ಕರೆಯುತ್ತಾರೆ. ಸಂಬೋಧಿಯ ಮನಸ್ಸು ಮುಕ್ತವಾದದು. ಇದನ್ನೇ ಬುದ್ಧ "ಅಕುಪ್ಪಾ ಮೇ ಚೇತೋ ವಿಮುತ್ತಿ", "ನನ್ನ ಮನಸ್ಸು ದಿಟವಾಗಿ ಬಿಡುಗಡೆಯನ್ನು ಪಡೆಯಿತು", ಎಂದು ಬಣ್ಣಿಸಿ ದನು.

(೬)

ಧ್ಯಾನಪಂಥವರಿಗೆ ವಜ್ರಚ್ಛೇದಿಕಾಸೂತ್ರ, ಲಂಕಾವತಾರಸೂತ್ರ, ವಿಮಲ ಕೀರ್ತಿ ನಿರ್ದೇಶಸೂತ್ರ, ಮಹಾಪ್ರಜ್ಞಾಪಾರಮಿತಾ ಸೂತ್ರ ಮೊದಲಾದುವು

ಮಾನ್ಯವಾದುವು. ಇವನ್ನು ಅವರು ಶಾಸ್ತ್ರಗಳಂತೆ ಕಾಣುವುದಿಲ್ಲ; ಧ್ಯಾನಕ್ಕೆ ಉಪಯುಕ್ತವಾದ ಉಪದೇಶಗಳಂತೆ ಪರಿಗಣಿಸುತ್ತಾರೆ. ಮನಸ್ಸಿನ ಬೆಟ್ಟವನ್ನೇರಿ ಹೋಗಲು, ಅದರ ತಳವನ್ನು ಸೇರಿ ನಡೆಯಲು ಅನುಕೂಲವಾಗುವಂಥ ಅಭ್ಯಾಸಗಳನ್ನು ಈ ಗ್ರಂಥಭಾಗಗಳು ಸೂಚಿಸುತ್ತವೆ. ಇವುಗಳಲ್ಲಿ ಪ್ರಜ್ಞಾಪಾರಮಿತಾಸೂತ್ರ ಪ್ರಸಿದ್ಧವಾದುದು. ಮನಸ್ಸಿನ ಆಳದಲ್ಲಿ ನಾವು ಕಾಣಬಹುದಾದ ಸಾರವೇ ಪ್ರಜ್ಞೆ; ಮನಸ್ಸಿನ ಎತ್ತರವನ್ನೆಲ್ಲ ಏರಿ ಅಲ್ಲಿ ನಾವು ಕಾಣುವ ನೋಟವೇ ಪ್ರಜ್ಞೆ. ಮನಸ್ಸು ತನ್ನ ಆಳ-ಎತ್ತರಗಳಲ್ಲಿ ಏಕ ರಸ; ಏಕೆಂದರೆ ಇದೇ ಅದರ ಸ್ವ-ಭಾವ. ಮನಸ್ಸಿನ ಆಳ-ಎತ್ತರ, ಹೊರಗು-ಒಳಗು ಎಂಬ ಭೇದವನ್ನು ದಾಟಿ ಹೋದರೆ ಅದು 'ಪಾರಮಿತಾ' ಎಂದರೆ ನೀರನ್ನು ದಾಟಿ ದಡವನ್ನು ಮುಟ್ಟಿದ್ದು ಎಂದರ್ಥ.

ಹೀಗೆ ನೀರನ್ನು ದಾಟಿ ದಡವನ್ನು ಮುಟ್ಟಿದಾಗ ಸಂಸಾರಕ್ಕೂ ಸಂಬೋಧಿಗೂ ನಡುವೆ ಯಾವ ಅಂತರವೂ ಕಾಣುವುದಿಲ್ಲ. ಇದು ಧ್ಯಾನ ಮಾರ್ಗದ ನಿಲುವು. ಮನಸ್ಸು ನಿಂತು ಅಂಟಿಕೊಂಡರೆ ಅದು ಸಂಸಾರ, ಅಂಟಿಕೊಳ್ಳದೆ ಮುಂದೆ ಹರಿದರೆ ಅದು ಸಂಬೋಧಿ. ಸಾಮಾನ್ಯ ಮನುಷ್ಯ ವಾಸ್ತವವಾಗಿ ಬುದ್ಧನೇ; ಆದರೆ ನಡುವಣ ನೆಲೆಯಲ್ಲಿ ನಿಂತ ಅವನ ಮನಸ್ಸು ಹೊರಗಿನ ವಸ್ತುಗಳಿಗೂ ಒಳಗಿನ ಬಯಕೆಗಳಿಗೂ ಅಂಟಿಕೊಳ್ಳುತ್ತದೆ. ಅಂಟಿಕೊಳ್ಳುವುದನ್ನು ಬಿಡುವುದೇ ಸಂಬೋಧಿ.

ಸಂಬೋಧಿಯೆಂದರೆ ಎಲ್ಲಿಂದಲೋ ಹೊಸದಾಗಿ ಒದಗಿಬರುವ ಸ್ಥಿತಿಯಲ್ಲ; ಬದುಕಿನ ವಿವರಗಳ ಮಾರ್ಪಾಟಲ್ಲ. ಸಂಬೋಧಿ ಎಲ್ಲರ ಒಳಗೂ ಯಾವಾಗಲೂ ಇರುವ ಸ್ಥಿತಿಯೇ; ಆದರೆ ಅದರ ಮುಂದೆ ತೆರೆಯೊಂದು ಎದ್ದಿದ್ದು ನಮ್ಮನ್ನು ಕ್ಲೇಶಪಡಿಸುತ್ತದೆ. ಈ ತೆರೆಯನ್ನು ತೆಗೆದು ಹಾಕುವ ಉಪಾಯವೇ ಧ್ಯಾನ. ತೆರೆ ಹರಿಯಿತೆಂದರೆ ಸಂಬೋಧಿಯ ಬೆಳಕು ತಾನೇ ತಾನಾಗಿ ಬೆಳಗುತ್ತದೆ. ಧ್ಯಾನಕ್ಕೆ ಮೊದಲು ಬದ್ಧ; ಧ್ಯಾನದ ನಂತರ ಬುದ್ಧ. ಆದರೆ ಧ್ಯಾನಕ್ಕೂ ಪ್ರಜ್ಞೆಗೂ ಅಂತರವಿದೆಯೆಂದು ಭಾವಿಸಬಾರದು. ಮನಸ್ಸಿನ ಎತ್ತರದಲ್ಲಿ ನಿಂತು ನೋಡುವುದು ಪ್ರಜ್ಞೆ; ಮನಸ್ಸಿನ ಆಳದಲ್ಲಿ ನಡೆಯುವುದು ಧ್ಯಾನ. ಪ್ರಜ್ಞೆ ಮೂಡಿಬಂದರೇ ಧ್ಯಾನಕ್ಕೆ ಸ್ಫೂರ್ತಿ, ಪ್ರೇರಣೆ, ಬಲ. ಧ್ಯಾನ ನಡೆದರೇ ಪ್ರಜ್ಞೆಗೆ ಸ್ಥೈರ್ಯ, ಶುದ್ಧಿ. ಧ್ಯಾನ-ಪ್ರಜ್ಞೆಗಳು ಒಂದನ್ನು ಬಿಟ್ಟು ಇನ್ನೊಂದು ಇರಲಾರವು. ಧ್ಯಾನವೆನ್ನುವುದು ಪ್ರಜ್ಞೆಯ ಕೆಲಸ; ಪ್ರಜ್ಞೆಯೆನ್ನುವುದು

ಧ್ಯಾನದ ಸಾರ. ಪ್ರಜ್ಞೆಯಿಂದ ಧ್ಯಾನ ಎಂದಾಗಲೀ, ಧ್ಯಾನದಿಂದ ಪ್ರಜ್ಞೆಯೆಂದಾಗಲೀ ಹೇಳುವುದಾಗದು. ಇವೆರಡರ ನಡುವೆ ಭೇದವಳಿದರೆ ಅದೇ ಸಂಬೋಧಿ.

ಸರಹಪಾದನೆಂಬುವ ಸಿದ್ಧ ಹೇಳಿದ—"ಎಲ್ಲರಲ್ಲಿಯೂ ಬುದ್ಧತ್ವವಿದೆ. ಆದರೆ ವಜ್ರ ಕೆಸರಲ್ಲಿ ಹೂತಿದ್ದರೆ ಅದರ ಹೊಳಪು ಮಾಸುತ್ತದೆ". ಹಾಗೆಯೇ ಸಂಸಾರದಲ್ಲಿ ನಾವು ಮುಳುಗಿದ್ದರೆ ನಮ್ಮ ಬುದ್ಧತ್ವ ಮಾಸಿರುತ್ತದೆ. ಆದರೆ ಅದರ ಸ್ವಭಾವದಲ್ಲಾಗಲೀ ಗುಣಧರ್ಮದಲ್ಲಾಗಲೀ ಇದರಿಂದಾಗಿ ಯಾವ ವ್ಯತ್ಯಾಸವೂ ಇರುವುದಿಲ್ಲ, ಯಾವ ವಿಕಾರವೂ ಒದಗುವುದಿಲ್ಲ. ಕೊಳೆ ಸೇರಿದರೆ ಸಂಸಾರ; ಕೊಳೆ ಕಳೆದರೆ ನಿರ್ವಾಣ.

ನಿರ್ವಾಣವನ್ನು 'ಪಾರ' ಎಂದರೆ ಆಚೆಯ ದಡ, 'ನಿಷ್ಪ್ರಪಂಚ' ಎಂದರೆ ಸಂಸಾರದಿಂದ ದೂರವಾದುದು, 'ಅನುಪದ್ರವ' ಎಂದರೆ ಅಡ್ಡಿ-ಆತಂಕಗಳಿಲ್ಲದ್ದು, 'ಅನುಪಸರ್ಗ' ಎಂದರೆ ಗೊಂದಲವಿಲ್ಲದ್ದು, 'ಗಂಭೀರ' ಎಂದರೆ ಆಳವಾದುದು, 'ಉತ್ತರ' ಎಂದರೆ ಎಲ್ಲವನ್ನೂ ಮೀರಿದುದು, 'ವಿಮಲ' ಎಂದರೆ ಕೊಳೆಯಿಲ್ಲದ್ದು ಎಂದು ಮೊದಲಾಗಿ ನಿರೂಪಣೆಗಳಿವೆ. ದುಃಖಗಳಿರುವುದು ಸಂಸಾರ; ದುಃಖವಿಲ್ಲದಿರುವುದು ನಿರ್ವಾಣ. ಎಂದಮಾತ್ರಕ್ಕೆ, ಇದೇನು ಶೂನ್ಯದ ಸ್ಥಿತಿಯಲ್ಲ. ಬೆಂಕಿಯ ಕಾವು ಆರಿದಂತೆ, ತಣ್ಣನೆಯ ನೀರು ಹರಿದಂತೆ (ಉದಕರಹದೋವ ಸೀತೋ), ಯಾವ ಹೆದರಿಕೆಯೂ ಇಲ್ಲದಿರುವಂತೆ (ಅಕುತೋ ಭಯ) ಈ ಮೊದಲಾದ ವರ್ಣನೆಗಳನ್ನು ಗಮನಿಸಿದರೆ ನಿರ್ವಾಣವು ನೆಮ್ಮದಿಯ ಸ್ಥಿತಿ, ಸುಖದ ಅವಸ್ಥೆ ಎಂಬುದು ಮನದಟ್ಟಾಗುತ್ತದೆ. ನಿರ್ವಾಣವನ್ನು ಅನುಭವಿಸುವ ಮಾತು, ನಿರ್ವಾಣವನ್ನು ಸೇರುವ ಮಾತು, ನಿರ್ವಾಣದಿಂದ ಆನಂದಪಡುವ ಮಾತು ಪಾಳಿಗ್ರಂಥಗಳಲ್ಲಿ ಹಲವೆಡೆ ಬರುತ್ತವೆ. ಹೃದಯದಲ್ಲಿಯೇ ನಿರ್ವಾಣವನ್ನು ಪಡೆದು ಅಲ್ಲಿಯೇ ನೆಲೆಸಬೇಕೆಂದು ಥೇರಗಾಥೆಯ ಒಂದು ಗಾಹೆ ಸೂಚಿಸುತ್ತದೆ (ನಿಬ್ಬಾಣಂ ಹದಯಸ್ಮಿಂ ಓಸಿಯ, ೧೧೯).

ಧ್ಯಾನ-ಪ್ರಜ್ಞೆಗಳ ಸಮಾವೇಶದಿಂದ ಸಂಬೋಧಿಯನ್ನು ಪಡೆದೊಡನೆ ಉಂಟಾಗುವ ಸ್ಥಿತಿ ನಿರ್ವಾಣವೇ. ಆಗ ಶರೀರವೇನು ಅಳಿಯುವುದಿಲ್ಲ; ಮನಸ್ಸು ಕರಗಿಹೋಗುವುದಿಲ್ಲ; ವಸ್ತುಸ್ಥಿತಿಯಲ್ಲಿ ಯಾವ ಮಾರ್ಪಾಟೂ ಜರುಗುವುದಿಲ್ಲ. ಎಲ್ಲವೂ ಮೊದಲಿದ್ದಂತೆಯೇ ಇರುತ್ತವೆ. ಆದರೆ ಮನಸ್ಸಿನ ಆಳ-ಎತ್ತರಗಳು ಕಾಣಿಸಿಕೊಳ್ಳುತ್ತವೆ. ನೋಟ ಮಾರ್ಪಡುತ್ತದೆ. ಸಂಬೋಧಿಯನ್ನು ಪಡೆ

ದವನು ವ್ಯವಹಾರದಲ್ಲಿಯೇ ಉಳಿಯುತ್ತಾನೆ; ಆದರೆ ಅವನದ್ದು ಅಂಟಿಕೊಳ್ಳುವ ಮನಸ್ಸಲ್ಲ, ತೆರೆಯ ಮರೆಯಲ್ಲಿ ಇಣಿಕಿನೋಡುವ ನೋಟವಲ್ಲ. ಮುಕ್ತವಾದ ಮನಸ್ಸು, ಹರವಿನ ನೋಟ.

ದಲ್ಲ ಮಲ್ಲ ಪುತ್ರ ಎಂಬ ಸ್ಥವಿರನು ಸಂಬೋಧಿಯನ್ನು ಪಡೆದಿದ್ದವನು. ಅವನು ಸಾಯುವ ಮೊದಲು ಈ ಗಾಹೆ ಅವನ ಬಾಯಿಂದ ಹೊರಬಂದಿತು.

ಅಭೇದಿ ಕಾಯೋ ನಿರೋಧಿ ಸಜ್ಞಾ, ವೇದನಾಪಿತಿದಹಂಸು|
ಸಬ್ಬಾ ವೂಪಸಮಿಂಸು ಸಂಖಾರಾ, ವಿಜ್ಞಾಣಂ ಅತ್ಥಮುಗಮಾ||

ಈಗ ದೇಹ ಬೀಳುತ್ತಿದೆ, ಮನಸ್ಸು ಕರಗುತ್ತಿದೆ, ಎಲ್ಲ ಭಾವಗಳೂ ಇಳಿಯುತ್ತಿವೆ, ಶರೀರದ ಮತ್ತು ಮನಸ್ಸಿನ ಎಲ್ಲ ಪ್ರವೃತ್ತಿಗಳೂ ನಿಲ್ಲುತ್ತಿವೆ, ಅರಿವು ನೆಮ್ಮದಿಯ ನೆಲೆಯನ್ನು ಮುಟ್ಟಿದೆ. ಇದನ್ನು ಪರಿನಿರ್ವಾಣವೆನ್ನುತ್ತಾರೆ, ಎಂದರೆ ಸಂಬುದ್ಧನಾದವನ ಶರೀರಪಾತವಾಗಿ ಮತ್ತೆ ಅವನ ಇರವು ಇಲ್ಲವಾಗುವುದು. ಈ ಸ್ಥಿತಿಯನ್ನು ಬುದ್ಧನು ತನ್ನ ಎಂಬತ್ತನೆಯ ವಯಸ್ಸಿನಲ್ಲಿ ಕುಶೀನಾರದ ಸಾಲವನದಲ್ಲಿ ವೈಶಾಖ ಪೂರ್ಣಿಮೆಯಂದು ಮುಟ್ಟಿದ. ಆದರೆ ಗಯೆಯಲ್ಲಿ ವೈಶಾಖಪೂರ್ಣಿಮೆಯಂದು ಪಡೆದುಕೊಂಡ ಸಂಬೋಧಿ ಅವನನ್ನು ನಲವತ್ತೈದು ವರ್ಷಗಳ ಕಾಲ ನಡೆಯಿಸಿತು. ಅವನು ಸಂಬುದ್ಧನಾಗಿ ವಿಹರಿಸಿದ.

ಇದೇ ಸಂಬೋಧಿಯ ಸ್ವಾರಸ್ಯ, ಅದರ ಸಾರ್ಥಕ್ಯ.

"ನಮೋ ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ"

ಮನವಿ

"ಶ್ರೀ ರಾಜರತ್ನಂ ಸಂಸ್ಮರಣ" ಸಮಿತಿಯ ಸತ್ಕಾರ್ಯಗಳಲ್ಲಿ ಮಹಾಜನರು ಈ ಕೆಳಗಿನಂತೆ ಸಹಕರಿಸಬಹುದು:

1. ರೂ. 25/– ಅಥವಾ ಅದಕ್ಕಿಂತ ಹೆಚ್ಚನ್ನು ತೆತ್ತು ಸಮಿತಿಯ ಸದಸ್ಯರಾಗುವುದು. ಅಂತಹ ಸದಸ್ಯರಿಗೆ ಸಮಿತಿಯ ಪ್ರಕಟನೆಗಳನ್ನು ಉಚಿತವಾಗಿ ನೀಡಲಾಗುವುದು.
2. ರೂ. 100/– ಅಥವಾ ಹೆಚ್ಚನ್ನು ತೆತ್ತು ಆಶ್ರಯದಾತರಾಗುವುದು. ಸಮಿತಿಯ ಪ್ರಕಟನೆಗಳನ್ನು ಅಂತಹವರಿಗೆ ನೀಡುವುದರೊಂದಿಗೆ, ಅವರ ಹೆಸರನ್ನು ವರ್ಷಾಂತ್ಯದ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.
3. ರೂ. 500/– ಮತ್ತು ಹೆಚ್ಚಿಗೆ ನೀಡಿ ಪೋಷಕರಾಗಿ ಸಮಿತಿಯ ಪ್ರಕಟನೆಗಳನ್ನು ಪಡೆಯುವುದು. ಎಲ್ಲ ಪ್ರಕಟನೆಗಳಲ್ಲೂ ಅವರ ಹೆಸರನ್ನು ಕೃತಜ್ಞತಾಪೂರ್ವಕ ಸ್ಮರಿಸಲಾಗುವುದು.
4. ಅಭಿಮಾನಿಗಳು ನೀಡುವ ರೂ. 25/– ಕ್ಕಿಂತ ಕಡಮೆಯ ಮೊತ್ತವನ್ನು ಕೃತಜ್ಞತೆಯೊಂದಿಗೆ ಸ್ವೀಕರಿಸಲಾಗುವುದು.

ಸಮಿತಿಯ ಪ್ರಕಟನೆಗಳು

1. ರತ್ನನ ಪದೊಕ್ಕುಲು —ಎನ್. ಭೋಜರಾಜ ಕಡಂಬ

['ರತ್ನನ ಪದಗಳ'ಂದ ಆಯ್ದ ಇಪ್ಪತ್ತೆರಡು ಕವಿತೆಗಳ ಸರಸ ಅನುವಾದ— ತುಳುವಿನಲ್ಲಿ]

2. ಜೀವರತ್ನ —ವಿವಿಧ ಲೇಖಕರು

[ಶ್ರೀ ರಾಜರತ್ನಂ ಅವರಿಗೆ ವಿವಿಧ ಮಹನೀಯರು ಅರ್ಪಿಸಿದ ಹಾರ್ದಿಕ ಶ್ರದ್ಧಾಂಜಲಿ]

3. ವೈಶಾಖ ಪೂರ್ಣಿಮೆ—ಸಂಬೋಧಿಯ ಸಂದರ್ಭ
ಪ್ರೊ|| ಎಸ್. ಕೆ. ರಾಮಚಂದ್ರರಾವ್

[ಬುದ್ಧಗುರುವಿನ ಅಂತರಂಗವನ್ನು ತೆರೆದು ತೋರುವ ಉಪನ್ಯಾಸ]

ಪ್ರತಿಗಳಿಗೆ:

ಅತ್ರಿ ಬುಕ್ ಸೆಂಟರ್

ಶರಾವತಿ ಬಿಲ್ಡಿಂಗ್, ಮಂಗಳೂರು-1.

ಶ್ರೀ ಜಿ. ಪಿ. ರಾಜರತ್ನಂ

ಅವರ ದಿವ್ಯಸ್ಮೃತಿಗೆ

ಈ ಪುಸ್ತಕವನ್ನು ಕಾಣಿಕೆಯಾಗಿ ಒಪ್ಪಿಸಲು

ಸಹಕರಿಸಿದ

ದೇವಿದಾಸ ಗಿರಿಧರಲಾಲ ಚಂದ್ರಾನಾ

ಚಾರಿಟೆಬಲ್ ಟ್ರಸ್ಟ್

ಮಂಗಳೂರು ದ.ಕ.

ಇವರಿಗೆ ಸಮಿತಿಯು ಋಣಿಯಾಗಿದೆ.